ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1430
ಸದಸ್ಯರ ಹೆಸರು : ಶ್ರೀ ರಘುನಾಥ ರಾವ್ ಮಲ್ಕಾಪೂರೆ
ಉತ್ತರಿಸುವ ದಿನಾಂಕ : 17.03.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ 3 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಗೊಂಡ ಅನುದಾನವೆಷ್ಟು: (ಯೋಜನಾವಾರು, ನಿಗಮವಾರು ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)	ಅನುಬಂಧ-1ರಲ್ಲಿ ನೀಡಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಮಂಜೂರು ಮಾಡಲಾದ ಸಮುದಾಯ ಭವನಗಳ ಸಂಖ್ಯೆ ಎಷ್ಟು: ಯಾವ ಯಾವ ನಿಗಮದಿಂದ ಯಾವಾಗ ಮಂಜೂರು ಮಾಡಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು)	ಅನುಬಂಧ-2ರಲ್ಲಿ ನೀಡಲಾಗಿದೆ.
ಇ)	ಕಳೆದ 3 ವರ್ಷಗಳಿಂದ ವಿವಿಧ ಅಭಿವೃದ್ಧಿ ನಿಗಮಗಳಿಂದ ಮಂಜೂರು ಮಾಡಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು: ಸ್ವಯಂ ಉದ್ಯೋಗ ನೇರ ಸಾಲ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಯೋಜನೆಯಡಿ ನೀಡಿದ ಅನುದಾನವೆಷ್ಟು: (ನಿಗಮವಾರು ಯೋಜನೆವಾರು ಫಲಾನುಭವಿಗಳ ಹೆಸರುಗಳವಾರು ಸಂಪೂರ್ಣ ವಿವರ ನೀಡುವುದು:	ಅನುಬಂಧ-3ರಲ್ಲಿ ನೀಡಲಾಗಿದೆ.
ಈ)	ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ವಿವಿಧ ಎಲ್ಲಾ ಯೋಜನೆಗಳಾವುವು? (ಸ್ಪಷ್ಟ ಆದೇಶದ ಪ್ರತಿ ನೀಡುವುದು)	ಅನುಬಂಧ-4ರಲ್ಲಿ ನೀಡಲಾಗಿದೆ.

ಸಂಖ್ಯೆ: ಸಕಇ 51 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಅನುಬಂಧ-1

ಬೀದರ್ ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ 3 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಗೊಂಡ ಅನುದಾನದ ವಿವರ

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ:

ಕ್ರ. ಸಂ	ವಿಧಾನಸಭಾ ಕ್ಷೇತ್ರಗಳ ಹೆಸರು	2017-18		2018-19		2019-20	
		ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ
	ಪರಿಶಿಷ್ಟ ಜಾತಿ ಕಾಲೋನಿಗಳ ಅಭಿವೃದ್ಧಿ/ ಪ್ರಗತಿ ಕಾಲೋನಿ ಯೋಜನೆ						
1	ಬಸವಕಲ್ಯಾಣ	0.00	0.00	235.00	235.00	0.00	0.00
2	ಹುಮ್ನಾಬಾದ್	0.00	0.00	135.00	121.50	0.00	0.00
3	ಬೀದರ್ ದಕ್ಷಿಣ.	0.00	0.00	110.00	99.00	0.00	0.00
4	ಬೀದರ್	0.00	0.00	240.00	216.00	150.00	45.00
5	ಭಾಲ್ಕಿ	0.00	0.00	485.00	406.50	0.00	0.00
6	ಔರಾದ್ (ಪ.ಜಾ)	0.00	0.00	100.00	90.00	100.00	30.00
	ಒಟ್ಟು	0.00	0.00	1305.00	1168.00	250.00	75.00
	ಡಾ॥ ಬಿ.ಆರ್. ಅಂಬೇಡ್ಕರ್/ ಡಾ॥ ಬಾಬು ಜಗಜೀವನರಾಮ್/ ಸಮುದಾಯ ಭವನಗಳ ನಿರ್ಮಾಣ.						
1	ಬಸವಕಲ್ಯಾಣ	0.00	0.00	36.00	9.00	0.00	0.00
2	ಹುಮ್ನಾಬಾದ್	0.00	0.00	120.00	30.00	0.00	0.00
3	ಬೀದರ್ ದಕ್ಷಿಣ	0.00	0.00	101.00	29.00	0.00	0.00
4	ಬೀದರ್	124.00	50.00	48.00	12.00	0.00	0.00
5	ಭಾಲ್ಕಿ	0.00	0.00	145.00	55.00	0.00	0.00
6	ಔರಾದ್ (ಪ.ಜಾ)	0.00	0.00	0.00	0.00	0.00	0.00
	ಒಟ್ಟು	124.00	50.00	450.00	135.00	0.00	0.00

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಪ್ರಗತಿ ಕಾಲೋನಿ			ವಾಲ್ಮೀಕಿ ಸಮುದಾಯ ಭವನ		
ವರ್ಷ	ನಿಗದಿ	ಬಿಡುಗಡೆ	ವರ್ಷ	ನಿಗದಿ	ಬಿಡುಗಡೆ
2017-18	0.00	0.00	2017-18	1118.00	607.25
2018-19	530.00	483.75	2018-19	96.00	48.00
2019-20	150.00	45.00	2019-20	-	-

ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ:

ಕ್ರ.ಸಂ.	ಕ್ಷೇತ್ರ	ನಿಗಮ	ಬಿಡುಗಡೆಗೊಂಡ ಅನುದಾನ		
			2017-18	2018-19	2019-20
01	ಔರಾದ್	ಡಾ:ಬಿ.ಆರ್.ಅಂಅನಿ	167.54	124.34	0.00
		ಕ.ಆದಿಜಾಂಬವ		82.89	-
		ಕ.ತಾಂಡ		96.00	-
02	ಬಸವಕಲ್ಯಾಣ	ಡಾ:ಬಿ.ಆರ್.ಅಂಅನಿ	118.63	88.08	0.00
		ಕ.ಆದಿಜಾಂಬವ		58.72	-
		ಕ.ತಾಂಡ		51.00	-
03	ಬಾಲ್ಕಿ	ಡಾ:ಬಿ.ಆರ್.ಅಂಅನಿ	132.56	98.38	0.00
		ಕ.ಆದಿಜಾಂಬವ		65.58	-
		ಕ.ತಾಂಡ		21.00	-
04	ಬೀದರ್	ಡಾ:ಬಿ.ಆರ್.ಅಂಅನಿ	57.55	42.72	0.00
		ಕ.ಆದಿಜಾಂಬವ		28.48	-
		ಕ.ತಾಂಡ		3.00	
05	ಬೀದರ್ ದಕ್ಷಿಣ	ಡಾ:ಬಿ.ಆರ್.ಅಂಅನಿ	116.90	86.76	0.00
		ಕ.ಆದಿಜಾಂಬವ		57.84	-
		ಕ.ತಾಂಡ		18.00	-
06	ಹುಮನಾಬಾದ್	ಡಾ:ಬಿ.ಆರ್.ಅಂಅನಿ	162.02	120.24	0.00
		ಕ.ಆದಿಜಾಂಬವ		80.16	-
		ಕ.ತಾಂಡ		21.00	-

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಸಹಾಯಧನ ರೂ.3.50 ಲಕ್ಷ)					
ಕ್ರ. ಸಂ.	ವಿಧಾನಸಭಾ ಕ್ಷೇತ್ರಗಳು	2018-19 ವಾರ್ಷಿಕ ಗುರಿ		2019-20 ವಾರ್ಷಿಕ ಗುರಿ	
		ಭೌತಿಕ	ಬಿಡುಗಡೆಯಾದ ಅನುದಾನ	ಭೌತಿಕ	ಬಿಡುಗಡೆಯಾದ ಅನುದಾನ
1	ಬೀದರ (ಉತ್ತರ)	2	7.00	2	7.00
2	ಬೀದರ (ದಕ್ಷಿಣ)	4	14.00	8	28.00
3	ಬಸವಕಲ್ಯಾಣ	5	17.50	11	38.50
4	ಹುಮನಬಾದ	4	14.00	10	35.00
5	ಭಾಲ್ಕಿ	2	7.00	5	17.50
6	ಔರಾದ	2	7.00	5	17.50
	ಒಟ್ಟು	19	66.50	41	143.50

ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಸಹಾಯಧನ ರೂ.5.00 ಲಕ್ಷ)

ಕ್ರ ಸಂ.	ವಿಧಾನಸಭಾ ಕ್ಷೇತ್ರಗಳು	2018-19 ವಾರ್ಷಿಕ ಗುರಿ		2019-20 ವಾರ್ಷಿಕ ಗುರಿ	
		ಭೌತಿಕ	ಬಿಡುಗಡೆಯಾದ ಅನುದಾನ	ಭೌತಿಕ	ಬಿಡುಗಡೆಯಾದ ಅನುದಾನ
1	ಬೀದರ (ಉತ್ತರ)	1	5.00	1	5.00
2	ಬೀದರ (ದಕ್ಷಿಣ)	1	5.00	5	25.00
3	ಬಸವಕಲ್ಯಾಣ	1	5.00	8	40.00
4	ಹುಮನಬಾದ	1	5.00	7	35.00
5	ಭಾಲ್ಕಿ	1	5.00	4	20.00
6	ಔರಾದ	1	5.00	4	20.00
	ಒಟ್ಟು	6	30:00	29	145.00

ಮೈಕ್ರೋ ಕ್ರೆಡಿಟ್ ಯೋಜನೆ (ಸಾಲ ಮತ್ತು ಸಹಾಯಧನ ರೂ.0.15 ಲಕ್ಷ)

ಕ್ರ ಸಂ.	ವಿಧಾನಸಭಾ ಕ್ಷೇತ್ರಗಳು	2018-19 ವಾರ್ಷಿಕ ಗುರಿ		2019-20 ವಾರ್ಷಿಕ ಗುರಿ		2020-21 ವಾರ್ಷಿಕ ಗುರಿ	
		ಭೌತಿಕ	ಬಿಡುಗಡೆಯಾದ ಅನುದಾನ	ಭೌತಿಕ	ಬಿಡುಗಡೆಯಾದ ಅನುದಾನ	ಭೌತಿಕ	ಬಿಡುಗಡೆಯಾದ ಅನುದಾನ
1	ಬೀದರ (ಉತ್ತರ)	10	2.50	10	2.50	20	5.00
2	ಬೀದರ (ದಕ್ಷಿಣ)	30	7.50	44	11.00	100	25.00
3	ಬಸವಕಲ್ಯಾಣ	40	10.00	58	14.50	130	32.50
4	ಹುಮನಬಾದ	30	7.50	54	13.50	110	27.50
5	ಭಾಲ್ಕಿ	20	5.00	27	6.75	60	15.00
6	ಔರಾದ	20	5.00	29	7.25	60	15.00
	ಒಟ್ಟು	150	37.50	222	55.50	480	120.00

ಸ್ವಯಂ ಉದ್ಯೋಗ ನೇರಸಾಲ ಯೋಜನೆ (ಸಾಲ ಮತ್ತು ಸಹಾಯಧನ ರೂ.0.50 ಲಕ್ಷ)			
ಕ್ರ. ಸಂ.	ವಿಧಾನಸಭಾ ಕ್ಷೇತ್ರಗಳು	2020-21	
		ವಾರ್ಷಿಕ ಗುರಿ	
		ಭೌತಿಕ	ಬಿಡುಗಡೆಯಾದ ಅನುದಾನ
1	ಬೀದರ (ಉತ್ತರ)	12	6.00
2	ಬೀದರ (ದಕ್ಷಿಣ)	52	26.00
3	ಬಸವಕಲ್ಯಾಣ	70	35.00
4	ಹುಮನಬಾದ	64	32.00
5	ಭಾಲ್ಕಿ	30	15.00
6	ಔರಾದ	36	18.00
	ಒಟ್ಟು	264	132.00

ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಸಹಾಯಧನ ರೂ.1.00 ಲಕ್ಷ)			
ಕ್ರ. ಸಂ.	ವಿಧಾನಸಭಾ ಕ್ಷೇತ್ರಗಳು	2020-21	
		ವಾರ್ಷಿಕ ಗುರಿ	
		ಭೌತಿಕ	ಬಿಡುಗಡೆಯಾದ ಅನುದಾನ
1	ಬೀದರ (ಉತ್ತರ)	5	5.00
2	ಬೀದರ (ದಕ್ಷಿಣ)	13	13.00
3	ಬಸವಕಲ್ಯಾಣ	17	17.00
4	ಹುಮನಬಾದ	16	16.00
5	ಭಾಲ್ಕಿ	8	8.00
6	ಔರಾದ	8	8.00
	ಒಟ್ಟು	67	67.00

ಡಾ: ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ

ಕ್ರ.ಸಂ	ಯೋಜನೆ	2017-18	2018-19	2019-20
1.	ತರಬೇತಿ ಕಾರ್ಯಕ್ರಮಗಳು	456.50	440.54	438.98
2.	ಸ್ವಯಂ ಉದ್ಯೋಗ ಯೋಜನೆಗಳು	199.80	983.01	1038.00
3.	ಡಾ. ಬಾಬು ಜಗಜೀವನ ರಾಂ ಚರ್ಮಕಾರರ ವಸತಿ ಯೋಜನೆ	3787.00	1408.95	1365.52
4.	ಪ್ರಗತಿ ಲಿಡ್‌ಕರ್ ಕಾಲೋನಿಗಳ ಸಮಗ್ರ ಅಭಿವೃದ್ಧಿ		1050.00	157.50
5.	ಲಿಡ್‌ಕರ್ ಪುನಃಶ್ಚೇತನ ಕಾರ್ಯಕ್ರಮಗಳು (ವಾಣಿಜ್ಯ ಉತ್ತೇಜನ ಕಾರ್ಯಕ್ರಮಗಳು)	556.70	417.50	1000.00
	ಒಟ್ಟು	5000.00	4300.00	4000.00

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ

ಕ್ರಸಂ	ವರ್ಷ	ಬಿಡುಗಡೆಯಾದ ಅನುದಾನದ ಮೊತ್ತ
1	2017–18	587.45
2	2018–19	266.45
3	2019–20	832.65

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಬೀದರ

ಉದ್ಯಮ ಶೀಲತಾ ಯೋಜನೆ

ಕ್ರ.ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	2018-19				2019-20				2020-21			
		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ	
		ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ	ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ	ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ
1	ಔರಾದ್	3	13.50	3	13.5	2	8.50	0	0	2	2.00	0	0
2	ಬಸವ ಕಲ್ಯಾಣ	3	13.50	0	0	2	8.50	0	0	3	3.00	0	0
3	ಭಾಲ್ಕಿ	2	8.50	1	5	1	5.00	0	0	3	3.00	0	0
4	ಬೀದರ(ಉ)	3	13.50	3	13.5	2	8.50	0	0	3	3.00	0	0
5	ಬೀದರ(ದ)	2	8.50	2	8.5	2	8.50	0	0	3	3.00	0	0
6	ಹುಮ್ನಾಬಾದ್	2	8.50	2	8.5	1	5.00	0	0	2	2.00	0	0
		15	66.00	10		10	44.00	0	0	16	16.00	0	0

ಮೈಕ್ರೊ ಕ್ರೆಡಿಟ ಕಿರು ಸಾಲ

ಕ್ರ.ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	2018-19				2019-20				2020-21			
		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ	
		ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ	ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ	ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ
1	ಔರಾದ್	0	0.00	0	0	0	0.00	0	0	0	31.00	2	0
2	ಬಸವ ಕಲ್ಯಾಣ	10	2.50	10	0	10	2.50	0	0	0	24.00	1	0
3	ಭಾಲ್ಕಿ	0	0.00	0	0	0	0.00	0	0	0	27.50	2	0
4	ಬೀದರ(ಉ)	0	0.00	0	0	10	2.50	0	0	0	17.00	1	0
5	ಬೀದರ(ದ)	0	0.00	0	0	10	2.50	0	0	0	24.00	0	0
6	ಹುಮ್ನಾಬಾದ್	10	2.50	10	0	8	0.00	0	0	0	31.00	2	0
		20	5.00	20	0	39	7.50	0	0	39	154.50	10	0

ಗಂಗಾ ಕಲ್ಯಾಣ ಯೋಜನೆ

ಕ್ರ.ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	2018-19						2019-20				2020-21			
		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ				ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ		ಗುರಿ		ಮಂಜೂರಾದ ಫಲಾನುಭವಿಗಳ ಸಂಖ್ಯೆ	
		ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ			ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ	ಭೌತಿಕ	ಆರ್ಥಿಕ	ಸಂಖ್ಯೆ	ಫಲಾನುಭವಿಗಳಿಗೆ ಮಂಜೂರಾದ ಹಣ
1	ಔರಾದ್	3	9.00	3	9.00	9.00	9.00	2	6.00	2	5	2	6.00	2	5
2	ಬಸವ ಕಲ್ಯಾಣ	4	12.00	4	12.00	12.00	12.00	2	6.00	2	6	2	6.00	2	6
3	ಭಾಲ್ಕಿ	3	9.00	3	9.00	9.00	9.00	1	3.00	1	3	3	9.00	3	9
4	ಬೀದರ(ಉ)	3	9.00	3	9.00	9.00	9.00	2	6.00	2	6	3	9.00	3	9
5	ಬೀದರ(ದ)	3	9.00	3	9.00	9.00	9.00	2	6.00	2	6	5	15.00	5	15
6	ಹುಮ್ನಾಬಾದ್	3	9.00	3	9.00	9.00	9.00	1	3.00	1	1	3	9.00	3	9
		19	57.00	19	57.00	57.00	57.00	10	154.50	10	0	18	54.00	18	54

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 'ಪ್ರಗತಿ ಕಾಲೋನಿ ಯೋಜನೆ' ಅಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿ/ತಾಂಡಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ.

ಓದಲಾಗಿದೆ: 2018-19ನೇ ಸಾಲಿನ (ಜುಲೈ) ಆಯವ್ಯಯದ ಕಂಡಿಕೆ - 82ರ ಘೋಷಣೆಯಂತೆ.

******

ಪ್ರಸ್ತಾವನೆ:

2018-19ನೇ (ಜುಲೈ) ಆಯವ್ಯಯದಲ್ಲಿನ ಕಂಡಿಕೆ-82ರಲ್ಲಿ 'ಪ್ರಗತಿ ಕಾಲೋನಿ ಯೋಜನೆ' ರೂಪಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿ/ತಾಂಡಗಳನ್ನು ಹಂತ-ಹಂತವಾಗಿ ಸಮಗ್ರ ಅಭಿವೃದ್ಧಿಪಡಿಸಲು ತಲಾ ಕನಿಷ್ಠ ರೂ.1.00 ಕೋಟಿ ಗರಿಷ್ಠ ರೂ.5.00 ಕೋಟಿಗಳವರೆಗೆ ಅನುದಾನ ಒದಗಿಸಲಾಗುವುದೆಂದು ಘೋಷಿಸಲಾಗಿದೆ.

ಈಗಾಗಲೇ ಎಸ್.ಸಿ/ಎಸ್.ಟಿ. ಕಾಲೋನಿಗಳನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ರಡಿಯಲ್ಲಿ ನೀಡಿದ ಅನುದಾನದಿಂದ ಜಾರಿಗೊಳಿಸಲಾಗುತ್ತಿದೆ. ಅಲ್ಲದೇ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ರಡಿಯಲ್ಲಿ ಕಾಲೋನಿಗಳ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆಗೆ ಸಹ ಅನುದಾನ ನೀಡಲಾಗುತ್ತಿದೆ.

ಆದರೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡಂತೆ ಸದರಿ ಯೋಜನೆಗೆ 'ಪ್ರಗತಿ ಕಾಲೋನಿ ಯೋಜನೆ' ಎಂದು ರೂಪಿಸಿ ಸಮಗ್ರ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ಎಸ್.ಸಿ/ಎಸ್.ಟಿ. ಕಾಲೋನಿಗಳು ಹಾಗೂ ಬಂಜಾರ ತಾಂಡಗಳು ಸೇರಿರುತ್ತವೆ.

2011 ರ ಜನಗಣತಿಯಂತೆ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಎಸ್.ಸಿ/ಎಸ್.ಟಿ. ಜನಸಂಖ್ಯೆಯ ವಿವರಗಳು ಲಭ್ಯವಿರುತ್ತವೆ. ಅಲ್ಲದೇ ತಾಂಡಗಳ ಪಟ್ಟಿ ಸಹ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಲಭ್ಯವಿರುತ್ತದೆ. ತಾಂಡಗಳಲ್ಲಿರುವ ಎಲ್ಲಾ ಜನರು ಬಂಜಾರ/ಲಮಾಣಿ/ಲಂಬಾಣಿ ಪರಿಶಿಷ್ಟ ಜಾತಿಗೆ ಸೇರಿರುತ್ತಾರೆ. 2011ರ ಜನಗಣತಿ ಪ್ರಕಾರ ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಶೇ.50%ಕ್ಕಿಂತ ಹೆಚ್ಚಿಗೆ ಎಸ್.ಸಿ/ಎಸ್.ಟಿ. ಜನರು ಇರುವ ಕಾಲೋನಿ/ತಾಂಡಗಳನ್ನು ಆಯ್ಕೆ ಮಾಡಿ ಸದರಿ ಕಾಲೋನಿ/ತಾಂಡಗಳಲ್ಲಿ ಕುಡಿಯುವ ನೀರು, ರಸ್ತೆ, ವಿದ್ಯುತ್, ಒಳಚರಂಡಿ, ಸಂಪರ್ಕ ರಸ್ತೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸಮಗ್ರ ಅಭಿವೃದ್ಧಿಪಡಿಸಲಾಗುವುದು. ಆಯ್ಕೆಯಾದ ಕಾಲೋನಿ/ತಾಂಡಗಳಲ್ಲಿ ಈಗಾಗಲೇ ಕಲ್ಪಿಸಿರುವ ಮೂಲಭೂತ ಸೌಕರ್ಯಗಳನ್ನು ಹೊರತುಪಡಿಸಿ, ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಮಾತ್ರ ಗುರ್ತಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಿ ಅದರ ಮೊತ್ತಕ್ಕೆ ಮಾತ್ರ ಸೀಮಿತಗೊಳಿಸಿ ಕೆ.ಟಿ.ಪಿ.ಪಿ. ಕಾಯ್ದೆಯಂತೆ ಟೆಂಡರ್ ಕರೆದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ಒಮ್ಮೆ ಸಮಗ್ರವಾಗಿ ಅಭಿವೃದ್ಧಿಪಡಿಸುವ ಮೂಲಕ ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿದಂತಾಗುತ್ತದೆ.

ಪ್ರಸ್ತಾಪಿಸಿದ ಮೇಲ್ಕಂಡ ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ಎಸ್.ಸಿ/ಎಸ್.ಟಿ. ಜನಸಂಖ್ಯೆ ಆಧಾರದ ಮೇಲೆ, ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿದ ಅನುದಾನದ ಲಭ್ಯತೆ ಆಧಾರದ ಮೇಲೆ ಕಾಲೋನಿ/ತಾಂಡಗಳನ್ನು ಆಯ್ಕೆ ಮಾಡಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.

ಆದ್ದರಿಂದ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 375 ಎಸ್‌ಡಿಸಿ 2018, ದಿನಾಂಕ10.10.2018

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಗತಿ ಕಾಲೋನಿ ಯೋಜನೆಯನ್ನು ಕೆಳಕಂಡ ಮಾರ್ಗಸೂಚಿಗಳಂತೆ ಜಾರಿಗೊಳಿಸಲು ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮಾರ್ಗಸೂಚಿಗಳು:

(1) 2011 ರ ಜನಗಣತಿಯಂತೆ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಎಸ್.ಸಿ/ಎಸ್.ಟಿ. ಜನಸಂಖ್ಯೆಯ ವಿವರಗಳು ಲಭ್ಯವಿರುತ್ತವೆ. ಅಲ್ಲದೇ ತಾಂಡಗಳ ಪಟ್ಟಿ ಸಹ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಲಭ್ಯವಿರುತ್ತದೆ. ಕಾರಣ 2011ರ ಜನಗಣತಿ ಪ್ರಕಾರ ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಶೇ.50%ಕ್ಕಿಂತ ಹೆಚ್ಚಿಗೆ ಎಸ್.ಸಿ/ಎಸ್.ಟಿ. ಜನರು ಇರುವ ಕಾಲೋನಿ/ತಾಂಡಗಳನ್ನು ಸರ್ಕಾರದ ಮಟ್ಟದಲ್ಲಿ ಆಯ್ಕೆ ಮಾಡಲಾಗುವುದು.

(2) ಆಯ್ಕೆಯಾದ ಕಾಲೋನಿ/ತಾಂಡಗಳಲ್ಲಿ ಕುಡಿಯುವ ನೀರು, ರಸ್ತೆ, ವಿದ್ಯುತ್, ಒಳಚರಂಡಿ, ಸಂಪರ್ಕ ರಸ್ತೆ, ಸಮುದಾಯ ಭವನ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕನಿಷ್ಟ ರೂ.1.00 ಕೋಟಿ, ಗರಿಷ್ಟ ರೂ.5.00 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸುವುದು. ಆದರೆ, ಸದರಿ ಕಾಲೋನಿ / ತಾಂಡಗಳಲ್ಲಿ ಅಗತ್ಯವಿರುವ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳುವುದು.

(3) ಆಯ್ಕೆಯಾದ ಕಾಲೋನಿ/ತಾಂಡಗಳಲ್ಲಿ ಈಗಾಗಲೇ ಕಲ್ಪಿಸಿರುವ ಮೂಲಭೂತ ಸೌಕರ್ಯಗಳನ್ನು ಹೊರತುಪಡಿಸಿ, ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಮಾತ್ರ ಗುರ್ತಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಿ ಅದರ ಮೊತ್ತಕ್ಕೆ ಮಾತ್ರ ಸೀಮಿತಗೊಳಿಸಿ ಕ.ಟಿ.ಪಿ.ಪಿ. ಕಾಯ್ದೆಯಂತೆ ಟೆಂಡರ್ ಕರೆದು ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

(4) ಈ ಯೋಜನೆ ಅಡಿಯಲ್ಲಿ ಸಮಗ್ರ ಅಭಿವೃದ್ಧಿಪಡಿಸಿದ ಕಾಲೋನಿ/ತಾಂಡಗಳಿಗೆ ಮತ್ತೊಮ್ಮೆ ಯಾವುದೇ ಅನುದಾನ ನೀಡುವ ಅವಶ್ಯಕತೆ ಇರುವುದಿಲ್ಲ.

(5) ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅಡಿಯಲ್ಲಿ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಇತರ ಇಲಾಖೆಗಳಿಗೆ ನೀಡಿದ ಅನುದಾನದಿಂದ ಅವಶ್ಯಕವಿರುವ ಕೆಲವು ಸೌಕರ್ಯಗಳನ್ನು ಒದಗಿಸಲು ಅವಕಾಶವಿರುತ್ತದೆ.

(6) ಸಮಾಜ ಕಲ್ಯಾಣ ಇಲಾಖೆಗೆ ನೀಡಿದ ಅನುದಾನದಿಂದ ಈ ಯೋಜನೆಗೆ ತಗಲುವ ವೆಚ್ಚವನ್ನು ಭರಿಸುವುದು.

(7) ಆಯ್ಕೆಯಾದ ಕಾಲೋನಿ/ತಾಂಡಗಳಲ್ಲಿ ಅವಶ್ಯಕತೆ ಇರುವ ಮೂಲಭೂತ ಸೌಲಭ್ಯಗಳನ್ನು ಗುರ್ತಿಸಿ ರೇಖಾ ಅಂದಾಜು ಪಟ್ಟಿಯೊಂದಿಗೆ ಪ್ರಸ್ತಾವನೆಗಳನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ ಇವರುಗಳ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

(8) ಪ್ರಗತಿ ಕಾಲೋನಿ ಯೋಜನೆ ಅಡಿ ಆಯ್ಕೆಯಾದ ಕಾಲೋನಿ/ತಾಂಡಗಳನ್ನು ಹೊರತುಪಡಿಸಿ, ಉಳಿದ ಕಾಲೋನಿ/ತಾಂಡಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಜಾರಿಯಲ್ಲಿರುವ ಯೋಜನೆ ಮುಂದುವರಿಯುತ್ತದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಪರಿಶಿಷ್ಟ ಜಾತಿ ಜನರಿಗೆ, ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ 2225-01-796-0-02 (ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು)ರಡಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ 2225-02-794-0-05 (ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು)ರಡಿ ಒದಗಿಸಿದ ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಸುಮತಿ) 10/10/18
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
6. ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
7. ಎಲ್ಲಾ ಜಂಟಿ/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
8. ಎಲ್ಲಾ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳಿಗೆ.
9. ಎಲ್ಲಾ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
3. ಸರ್ಕಾರದ ಜಂಟಿ/ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಅಭಿವೃದ್ಧಿಗೆ ಭವನಗಳನ್ನು ನಿರ್ಮಿಸಲು ಪರಿಷ್ಕೃತ ಕಾರ್ಯವಿಧಾನ / ಮಾರ್ಗಸೂಚಿಯ ಆದೇಶವನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಸಕಇ 327 ಪಕವಿ 2015, ದಿನಾಂಕ: 16-09-2015.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:16-09-2015 ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಡಾ||ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ, ಡಾ||ಬಾಬು ಜಗಜೀವನ ರಾಂ ಸಮುದಾಯ ಭವನ, ಸೇವಾಲಾಲ್ ಸಮುದಾಯ ಭವನ ಹಾಗೂ ಮಹರ್ಷಿ ವಾಲ್ಮೀಕಿ ಭವನ ಇವುಗಳನ್ನು ಗ್ರಾಮ/ಹೋಬಳಿ (ಪಟ್ಟಣ ಪಂಚಾಯಿತಿ)/ ತಾಲ್ಲೂಕು / ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಿರ್ಮಿಸುವ ಕಾರ್ಯವಿಧಾನ / ಮಾರ್ಗಸೂಚಿಗಳನ್ನು ಅನುಸರಿಸಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿತ್ತು.

ಪ್ರಸ್ತುತ ಭವನ ನಿರ್ಮಾಣ ಕಾಮಗಾರಿ ಸಾಮಗ್ರಿಗಳ ಮಾರುಕಟ್ಟೆ ದರಗಳು ಹೆಚ್ಚಾಗಿರುವುದರಿಂದ ಮತ್ತು ಭವನಗಳ ಮಾರ್ಗಸೂಚಿಗಳಲ್ಲಿ ಕೆಲವು ಬದಲಾವಣೆಗಳನ್ನು ತರಬೇಕಾಗಿದ್ದರಿಂದ ಸದರಿ ಮಾಗಸೂಚಿಗಳನ್ನು ಪರಿಷ್ಕರಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 338 ಪಕವಿ 2018, ಬೆಂಗಳೂರು, ದಿನಾಂಕ: 25-03-2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ರಾಜ್ಯದಲ್ಲಿ ಡಾ||ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ, ಡಾ||ಬಾಬು ಜಗಜೀವನ ರಾಂ ಸಮುದಾಯ ಭವನ, ಸೇವಾಲಾಲ್ ಸಮುದಾಯ ಭವನ ಹಾಗೂ ಮಹರ್ಷಿ ವಾಲ್ಮೀಕಿ ಭವನ ಇವುಗಳನ್ನು ಗ್ರಾಮ/ಹೋಬಳಿ (ಪಟ್ಟಣ ಪಂಚಾಯಿತಿ)/ ತಾಲ್ಲೂಕು / ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಿರ್ಮಿಸುವಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಷ್ಕೃತ ಮಾರ್ಗಸೂಚಿಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಘಟಕ ವೆಚ್ಚ ಮತ್ತು ಕಾರ್ಯವಿಧಾನ /ಮಾರ್ಗಸೂಚಿಗಳು ತಕ್ಷಣವೇ ಜಾರಿಗೆ ಬರುತ್ತವೆ ಸಂಬಂಧಪಟ್ಟ ಅಧಿಕಾರಿಗಳು ಈ ಮಾರ್ಗಸೂಚಿಗಳಂತೆ ಕ್ರಮ ಜರುಗಿಸತಕ್ಕದ್ದು. ದಿನಾಂಕ: 16-09-2015 ರಲ್ಲಿ ನೀಡಿದ ಮಾರ್ಗಸೂಚಿಗಳನ್ನು ತಕ್ಷಣವೇ ಹಿಂಪಡೆಯಲಾಗಿದೆ.

ಷರತ್ತುಗಳು:-

1. ಹೊಸದಾಗಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಭವನಗಳಿಗೆ ನಿವೇಶನ ದೊರೆತ ನಂತರ ಸೂಕ್ತ ಪ್ರಸ್ತಾವನೆ ಸಲ್ಲಿಸುವುದು.
2. ನಿವೇಶನ ಇಲ್ಲದ ಕಡೆ ಭವನ ಮಂಜೂರು ಮಾಡಬಾರದು.
3. ಸರ್ಕಾರದಿಂದ ಮಂಜೂರಾದ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ನೀಡುವುದಿಲ್ಲ.

------2

4. ಗ್ರಾಮ, ಹೋಬಳಿ, ತಾಲ್ಲೂಕು ಮಟ್ಟದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಭವನಗಳಿಗೆ ಮಾದರಿ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಏಕ ರೂಪ ಮಾದರಿ ವಿನ್ಯಾಸವನ್ನು ಕ್ರೈಸ್ ಸಂಸ್ಥೆವತಿಯಿಂದ ಪಡೆದು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಿವಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ (ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 500 ಪ್ರತಿಗಳನ್ನು ಸಮಾಜ ಕಲ್ಯಾಣ ಇಲಾಖೆ ಗೆ ಒದಗಿಸುವಂತೆ ಕೋರಿದೆ.)

ಇವರಿಗೆ ಪ್ರತಿ:-

1. ಮಹಾಲೇಖಪಾಲರು, (ಎ&ಇ,ಲೆಕ್ಕಪರಿಶೋಧನೆ-1,ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಬಂಜಾರ ತಾಂಡ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ/ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ.
10. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ/ಗುಲ್ಬರ್ಗಾ/ಬಳ್ಳಾರಿ/ಧಾರವಾಡ-ಹುಬ್ಬಳ್ಳಿ/ಮೈಸೂರು /ಮಂಗಳೂರು/ ಶಿವಮೊಗ್ಗ/ ತುಮಕೂರು (ಕ್ರ.ಸಂ. 6 ರಿಂದ 10 ರವರೆಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಮುಖಾಂತರ)
11. ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ ಯೋಜನಾ ಸಮನ್ವಯಾಧಿಕಾರಿಗಳು/ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ (ಕ್ರ.ಸಂ. 4 ರ ಮುಖಾಂತರ)
12. ಎಲ್ಲಾ ತಹಶೀಲ್ದಾರರು.
13. ಎಲ್ಲಾ ಸಹಾಯಕ ಕಾರ್ಯಪಾಲರು ಇಂಜಿನಿಯರಿಂಗ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ/ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ
14. ಎಲ್ಲಾ ನಗರ ಸಭೆ/ ಪಟ್ಟಣ ಪಂಚಾಯತಿ ಮುಖ್ಯ ಅಧಿಕಾರಿಗಳು.
15. ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿವಾಹಕ ಅಧಿಕಾರಿಗಳು.
16. ಎಲ್ಲಾ ತಾಲ್ಲೂಕು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. (ಕ್ರ.ಸಂ. 12 ರಿಂದ 16 ರವರೆಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಮುಖಾಂತರ)
17. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

-----3

<u>ಪ್ರತಿ ಇವರಿಗೆ ಮಾಹಿತಿಗಾಗಿ:</u>

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
3. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ:206, 2 ನೇ ಮಹಡಿ, ವಿಧಾನಸೌಧ

****

<u>ಸರ್ಕಾರದ ಆದೇಶ ಸಂಖ್ಯೆ : ಸಕಇ 338 ಪಕವಿ 2018, ದಿನಾಂಕ: 25-03-2019 ಕ್ಕೆ ಅನುಬಂಧ</u>

****

ಸರ್ಕಾರದ ಆದೇಶ ಸಂಖ್ಯೆ: ಸಕಇ 327 ಪಕವಿ 2015,ದಿನಾಂಕ: 19.09.2015ರನ್ವಯ ಮೇಲ್ಕಂಡ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅನುದಾನವನ್ನು ಒದಗಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಪ್ರಸ್ತುತ ಸದರಿ ಮಾರ್ಗಸೂಚಿಗಳನ್ನು ಪರಿಷ್ಕರಿಸುವುದರೊಂದಿಗೆ ಈ ಉದ್ದೇಶಕ್ಕಾಗಿ ವಿವಿಧ ಹಂತಗಳಲ್ಲಿ ಪ್ರತಿ ಭವನ ನಿರ್ಮಾಣಕ್ಕಾಗಿ ನೀಡಲಾಗುವ ಅನುದಾನದ ಮೊತ್ತವನ್ನು ಹೆಚ್ಚಿಸುವುದು ಅವಶ್ಯಕವಾಗಿರುತ್ತದೆ. ಆದುದರಿಂದ, ಈ ಕೆಳಕಂಡಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

<u>ಪರಿಷ್ಕೃತ ಮಾರ್ಗಸೂಚಿಗಳು:</u>

1. <u>ಉದ್ದೇಶ:</u> ಈ ಭವನ/ಹಾಲ್‌ಗಳನ್ನು ಸಮುದಾಯದ ಉಪಯೋಗಕ್ಕಾಗಿ ಅಂದರೆ ಸಭೆ, ಸಮಾರಂಭಗಳಿಗೆ ಮತ್ತು ವಿವಿಧ ಸಾಂಪ್ರದಾಯಿಕ ಕಾರ್ಯಕ್ರಮಗಳು ಅಂದರೆ ಮದುವೆ ಮುಂತಾದವುಗಳಿಗೆ ಬಳಸತಕ್ಕದ್ದು.

2. <u>ಈ ಕಟ್ಟಡಗಳ ನಿರ್ಮಾಣಕ್ಕಾಗಿ ನೀಡಲಾಗುವ ಅನುದಾನ:</u> ಈ ಭವನ ನಿರ್ಮಾಣದ ಉದ್ದೇಶ ಮತ್ತು ಅಗತ್ಯ ಸೌಲಭ್ಯಗಳನ್ನು ಪರಿಗಣಿಸಿ, ವೆಚ್ಚದ ಮೊತ್ತವನ್ನು ವಿವಿಧ ಹಂತಗಳಿಗೆ ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

1	ಗ್ರಾಮದ ಹಂತ	ರೂ.20.00ಲಕ್ಷ
2	ಹೋಬಳ/ಪಟ್ಟಣ ಪಂಚಾಯಿತಿ ಹಂತ	ರೂ.75.00 ಲಕ್ಷ
3	ತಾಲ್ಲೂಕು ಹಂತ	ರೂ.2.00 ಕೋಟಿ
4	ಜಿಲ್ಲಾ ಹಂತ	ರೂ.4.00 ಕೋಟಿ

ಕೆಲವು ಅರ್ಹ ಸಂಧರ್ಭಗಳಲ್ಲಿ ರಾಜ್ಯ ಸರ್ಕಾರವು ಈ ಮೇಲ್ಕಂಡ ಎಲ್ಲಾ ಹಂತದ ಅನುದಾನದ ಮೊತ್ತವನ್ನು ಅನುಮೋದಿಸುವ ಸಂದರ್ಭಗಳಲ್ಲಿ ಹೆಚ್ಚಿಸಬಹುದಾಗಿದೆ.

ಟಿಪ್ಪಣಿ: ರಾಜ್ಯ ಸರ್ಕಾರವು ಮೇಲಿನಂತೆ ಅನುದಾನವನ್ನು ಬಿಡುಗಡೆಗೊಳಸುತ್ತದೆ ಮತ್ತು ಮೇಲಿನಂತೆ ವೆಚ್ಚವನ್ನು ಭರಿಸುತ್ತದೆ. ಜಿಲ್ಲಾ ಸಮಿತಿಯು ಈ ಕಟ್ಟಡ ನಿರ್ಮಾಣಕ್ಕಾಗಿ ತಗಲುವ ಹೆಚ್ಚುವರಿ ವೆಚ್ಚವನ್ನು MPLAD/MLA ರಡಿಯಲ್ಲಿನ ಅನುದಾನ ಮತ್ತು ಸ್ಥಳೀಯ ಸಂಸ್ಥೆಗಳಿಂದ 24.10% ಅನುದಾನದ ಹೆಚ್ಚುವರಿ ಮೊತ್ತವನ್ನು ವಿವಿಧ ಕಾಮಗಾರಿಗಳಿಗೆ ಪಡೆದುಕೊಳ್ಳಬಹುದಾಗಿದೆ.

3. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಭವನ ನಿರ್ಮಾಣಕ್ಕೆ ಆಡಳತಾತ್ಮಕ ಅನುಮೋದನೆಯನ್ನು ಸರ್ಕಾರವು ನೀಡುತ್ತದೆ ಮತ್ತು ಈ ಕಟ್ಟಡ ಕಾಮಗಾರಿಯ ಕಾರ್ಯವನ್ನು ಸರ್ಕಾರವು ಸೂಕ್ತ ಸರ್ಕಾರದ ಸಂಸ್ಥೆಗೆ ನೀಡುತ್ತದೆ. ಸದರಿ ಸರ್ಕಾರಿ ಸಂಸ್ಥೆಯು ಕಟ್ಟಡ ಕಾಮಗಾರಿ ಕಾರ್ಯವನ್ನು ಅನುಮೋದಿತ ನಕ್ಷೆಯನ್ವಯ ಹಾಗೂ ವೆಚ್ಚದನ್ವಯ ಕೆಟಿಪಿಪಿ ಕಾಯ್ದೆಯ ನಿಯಮಗಳನುಸಾರ ಕೈಗೊಳ್ಳತಕ್ಕದ್ದು. ಪ್ರಸ್ತಾಪಿತ ಅನುದಾನವನ್ನು ಈ ಸರ್ಕಾರಿ ಸಂಸ್ಥೆಗಳಿಗೆ ಸರ್ಕಾರದ ಆದೇಶಾನುಸಾರ ಜಿಲ್ಲಾಧಿಕಾರಿ/ ನಿರ್ದೇಶಕರಿಂದ ಬಿಡುಗಡೆಗೊಳಸಲಾಗುವುದು. ಆದಾಗ್ಯೂ ಕಟ್ಟಡ ಕಾಮಗಾರಿಯ ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ಜಿಲ್ಲಾ ಅನುಷ್ಠಾನ ಸಮಿತಿ ಮತ್ತು ಇಲಾಖಾ ಮುಖ್ಯಸ್ಥರಿಂದ ಕೈಗೊಳ್ಳಲಾಗುವುದು.

ಗ್ರಾಮ/ಹೋಬಳ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಭವನಗಳಿಗೆ ಜಿಲ್ಲಾ ಅನುಷ್ಠಾನ ಸಮಿತಿ ನಿರ್ಣಯದನ್ವಯ ಅನುಮೋದನೆ ಮತ್ತು ಅನುಷ್ಠಾನವನ್ನು ನೀಡಲಾಗುತ್ತದೆ.

4. <u>ನಿವೇಶನ/ಸ್ಥಳ:</u>

a). ಸರ್ಕಾರಿ ನಿವೇಶನ/ಸ್ಥಳಯ ಸಂಸ್ಥೆಗಳಿಗೆ ಮೀಸಲಿರಿಸಿದ ಸರ್ಕಾರಿ ನಿವೇಶನ: ಕಟ್ಟಡ ಕಾಮಗಾರಿಯು ಪ್ರಾರಂಭವಾಗುವ ಮುನ್ನ ಸದರಿ ನಿವೇಶನವನ್ನು ಭವನದ ಹೆಸರಿನಲ್ಲಿ ವರ್ಗಾಯಿಸತಕ್ಕದ್ದು. ಸಮಾಜ ಕಲ್ಯಾಣ ಅಧಿಕಾರಿಗಳು ಖಾತೆಯನ್ನು ಭವನದ ಹೆಸರಿನಲ್ಲಿ ಪಡೆದ ನಂತರ ಅನುಮೋದಿತ ಅನುದಾನವನ್ನು ಕಟ್ಟಡ ಕಾಮಗಾರಿಗಾಗಿ ಬಿಡುಗಡೆಗೊಳಿಸತಕ್ಕದ್ದು.

b) ನಿವೇಶನವು ಒಂದು ವೇಳೆ ಖಾಸಗಿ ವ್ಯಕ್ತಿ/ಸಂಘಟನೆ/ಸಂಸ್ಥೆ /ಸಂಘ/ಸೊಸೈಟಿ/ಸಮಿತಿ ಗಳಿಗೆ ಸೇರಿದ್ದಾಗಿದ್ದರೆ: ಸರ್ಕಾರವು ಒದಗಿಸುತ್ತಿರುವ ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಒದಗಿಸುವ ಸಂದರ್ಭದಲ್ಲಿ ಅಂತಹ ನಿವೇಶನಗಳನ್ನು ಸಹ ಜಂಟಿಯಾಗಿ ಖಾಸಗಿ ವ್ಯಕ್ತಿ/ ಸಂಘಟನೆಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆಯ ಹೆಸರಿನಲ್ಲಿ ವರ್ಗಾಯಿಸತಕ್ಕದ್ದು. ಈ ಸಮುದಾಯ ಭವನದ ಉಪಯೋಗವು ಕೇವಲ ಸ್ಥಳಯ ವ್ಯಕ್ತಿ ಅಥವಾ ಸಂಘಟನೆಗಳ <u>ಉಪಯೋಗಕ್ಕಾಗಿ ಅಲ್ಲದೇ ಪೂರ್ಣ ಪ್ರಮಾಣದಲ್ಲಿ ಸಮುದಾಯದ ಸದುಪಯೋಗಕ್ಕಾಗಿ ಮಾತ್ರ</u> ಬಳಸಿಕೊಳ್ಳಲಾಗುತ್ತಿದೆ ಎಂದು ಅವಶ್ಯಕವಾಗಿ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಸಮಾಜ ಕಲ್ಯಾಣ ಅಧಿಕಾರಿಗಳು ಸಂಬಂಧಿತ ನಿವೇಶನದ ಖಾತೆಯನ್ನು ಪಡೆದುಕೊಂಡ ನಂತರ ಅನುಮೋದಿತ ಅನುದಾವನ್ನು ಬಿಡುಗಡೆಗೊಳಸಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

5. <u>ಅನುಮೋದಿಸುವ ಪ್ರಾಧಿಕಾರ:</u>

a) ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಸರ್ಕಾರವು ರೂ.1.00 ಕೋಟಿ ಮೀರಿದ ಅನುದಾನ.

b) ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಇಲಾಖಾ ಮುಖ್ಯಸ್ಥರು ಅವರ ಆರ್ಥಿಕ ಪ್ರತ್ಯಾಯೋಜಿತ ಅಧಿಕಾರದನ್ವಯ ಅಂದರೆ ರೂ.1.00 ಕೋಟಿ (ಈ ಮೇಲ್ಕಂಡ ಅನುಮೋದನೆಗಳು ಪ್ರತಿ ವರ್ಷದ ಆಯವ್ಯಯದ ಲಭ್ಯತೆಗನುಗುಣವಾಗಿ ನೀಡಲಾಗುತ್ತದೆ.)

<u>5. ಕಾಮಗಾರಿ ವೆಚ್ಚದ ಆಡಳತಾತ್ಮಕ ಮತ್ತು ತಾಂತ್ರಿಕ ಅನುಮೋದನೆ:</u>

ಜಿಲ್ಲೆಯ ಜಿಲ್ಲಾಧಿಕಾರಿ/ಇಲಾಖಾ ಮುಖ್ಯಸ್ಥರು ಮತ್ತು ಸರ್ಕಾರ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ

6. <u>1. ಅನುಷ್ಠಾನ:</u> ಸಮಿತಿಯು ಈ ಕೆಳಕಂಡಂತೆ ರಚಿಸಲಾಗಿದೆ.

1	ಜಿಲ್ಲಾಧಿಕಾರಿ	ಅಧ್ಯಕ್ಷರು
2	ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯರು
3	ಕಾರ್ಯಕಾರಿ ಅಭಿಯಂತರರು, ಪಿಡಬ್ಲ್ಯೂಡಿ	ಸದಸ್ಯರು
4	ಕಾರ್ಯಕಾರಿ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ	ಸದಸ್ಯರು
5	ಆಯುಕ್ತರು, ನಗರ / ಅವರ ಪ್ರತಿನಿಧಿ	ಸದಸ್ಯರು
6	ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ ಜಿಲ್ಲಾ ಬುಡಕಟ್ಟು ಅಧಿಕಾರಿ	ಸದಸ್ಯರು
7	ಜಿಲ್ಲೆಯ ಜಿಲ್ಲಾಧಿಕಾರಿಯಿಂದ ನಾಮನಿರ್ದೇಶಿತ 3 ವ್ಯಕ್ತಿಗಳು	ಸದಸ್ಯರು

6.2.ಸಮಿತಿಯ ಕರ್ತವ್ಯಗಳು:

a) ವೆಚ್ಚ ಮತ್ತು ನಕ್ಷೆಯ ಅನುಮೋದನೆ (ಗ್ರಾಮ/ಹೋಬಳಿ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಭವನಗಳಿಗೆ)
b) ಸದಸ್ಯ ಕಾರ್ಯದರ್ಶಿಯವರಿಂದ ಟೆಂಡರ್ ಆಹ್ವಾನಿಸುವುದು.
c) ಟೆಂಡರ್‌ನ ಅನುಮೋದನೆ
d) ಕಾಮಗಾರಿಯನ್ನು ಕಾರ್ಯಕಾರಿ ಸಂಸ್ಥೆಗೆ/ ಗುತ್ತಿಗೆದಾರರಿಗೆ ವಹಿಸುವುದು.
e) ಕಾಮಗಾರಿಯ ಪರಿಶೀಲನೆ ಮತ್ತು ಮುಕ್ತಾಯಗೊಳಿಸುವುದು.
f) ಜಿಲ್ಲಾ ಹಂತದ ಭವನ ಕಾಮಗಾರಿಗಳ ಉಸ್ತುವಾರಿ ಮತ್ತು ಪ್ರತಿನಿತ್ಯದ ಮೇಲ್ವಿಚಾರಣೆ.
g) ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು(ಭವನದ ಹೆಸರಿನಲ್ಲಿ ಮೇಲುಸ್ತುವಾರಿಗಾಗಿ)
h) ಜಿಲ್ಲಾ ಹಂತದ ಭವನದಲ್ಲಿ ನಡೆಯುವ ಸಭೆ ಸಮಾರಂಭಗಳಿಗೆ ವೆಚ್ಚವನ್ನು ನಿಗಧಿಪಡಿಸುವುದು ಮತ್ತು ಸದರಿ ಮೊತ್ತವನ್ನು ಭವನದ ನಿರ್ವಹಣೆಗಾಗಿ ಉಪಯೋಗಿಸತಕ್ಕದ್ದು.(ಪರಿಶಿಷ್ಠ ಪಂಗಡ ಮತ್ತು ವರ್ಗದ ವ್ಯಕ್ತಿ/ ಸಂಘಟಣೆಗಳಿಗೆ ರಿಯಾಯಿತಿ ದರಗಳನ್ನು ನಿಗದಿಪಡಿಸತಕ್ಕದ್ದು)
i) ಸದರಿ ಮೊತ್ತವನ್ನು ಭವನದ ನಿರ್ವಹಣೆ ಮತ್ತು ಇನ್ನಿತರೇ ಸಂಬಂಧಿತ ಚಟುವಟಿಕೆಗಳಿಗೆ ಉಪಯೋಗಿಸತಕ್ಕದ್ದು.

6.3 ಅನುದಾನದ ಬಿಡುಗಡೆ: ಆಯುಕ್ತರು, ಪರಿಶಿಷ್ಠ ಪಂಗಡ ಮತ್ತು ನಿರ್ದೇಶಕರು, ಪರಿಶಿಷ್ಠ ಜಾತಿ ಇವರು ಅನುಮೋದಿತ ವೆಚ್ಚವನ್ನು ಕಾಮಗಾರಿಯನ್ನು ಕೈಗೊಳ್ಳಲು ನಿಯೋಜಿತ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ/ಸರ್ಕಾರಿ ಸಂಸ್ಥೆಗೆ ಬಿಡುಗಡೆಗೊಳಿಸುವುದು ಮತ್ತು ಅನುದಾನ ಬಿಡುಗಡೆಯ ನಂತರ ವೆಚ್ಚ ನಿರ್ವಹಣಾ ಪತ್ರವನ್ನು ಕಾಲಕಾಲಕ್ಕೆ ಪಡೆದುಕೊಳ್ಳತಕ್ಕದ್ದು.

6.4 ಇಲಾಖಾ ಮುಖ್ಯಸ್ಥರಿಂದ ಮೇಲ್ವಿಚಾರಣೆ: ಕಟ್ಟಡ ಕಾಮಗಾರಿಯ ಮೇಲ್ವಿಚಾರಣೆ ಮತ್ತು ನಿಗಧಿತ ಅವಧಿಯೊಳಗೆ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸುವ ಸಂಪೂರ್ಣ ಜವಾಬ್ದಾರಿಯನ್ನು ಇಲಾಖಾ ಮುಖ್ಯಸ್ಥರು ಹೊಂದಿರುತ್ತಾರೆ.

7. ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ ಉಳಿದ ಭವನಗಳ ಮೇಲ್ವಿಚಾರಣೆ:

ಸದರಿ ಭವನಗಳ ಕಾಲಕಾಲಿಕ ನಿರ್ವಹಣೆಗಾಗಿ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿದೆ.

7.1 ಹೋಬಳಿ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಭವನಗಳಿಗೆ

1	ತಹಶೀಲ್ದಾರ್	ಅಧ್ಯಕ್ಷರು
2	ಕಾರ್ಯಕಾರಿ ಅಭಿಯಂತರರು, ಪಿಡಬ್ಲ್ಯೂಡಿ	ಸದಸ್ಯರು
3	ಸಹಾಯಕ ಕಾರ್ಯಕಾರಿ ಅಭಿಯಂತರರು, ಪಿಡಬ್ಲ್ಯೂಡಿ	ಸದಸ್ಯರು
4.	ಸಹಾಯಕ ಕಾರ್ಯಕಾರಿ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ	ಸದಸ್ಯರು
5	4 ಮುಖ್ಯ ಅಧಿಕಾರಿಗಳು, ಪಟ್ಟಣ ಪಂಚಾಯಿತಿ/ಟಿಎಂಸಿ	ಸದಸ್ಯರು
6	ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ	ಸದಸ್ಯರು
7	ಜಿಲ್ಲೆಯ ಜಿಲ್ಲಾಧಿಕಾರಿಯಿಂದ ನಾಮನಿರ್ದೇಶಿತ 3 ವ್ಯಕ್ತಿಗಳು	ಸದಸ್ಯರು

7.2 ಸಮಿತಿಯ ಕರ್ತವ್ಯಗಳು:

a) ಭವನ ಕಾಮಗಾರಿಗಳ ಉಸ್ತುವಾರಿ ಮತ್ತು ಪ್ರತಿನಿತ್ಯದ ಮೇಲ್ವಿಚಾರಣೆ

b) ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು(ಭವನದ ಹೆಸರಿನಲ್ಲಿ ಮೇಲುಸ್ತುವಾರಿಗಾಗಿ)

c) ಜಿಲ್ಲಾ ಹಂತದ ಭವನದಲ್ಲಿ ನಡೆಯುವ ಸಭೆ ಸಮಾರಂಭಗಳಿಗೆ ವೆಚ್ಚವನ್ನು ನಿಗಧಿಪಡಿಸುವುದು ಮತ್ತು ಸದರಿ ಮೊತ್ತವನ್ನು ಭವನದ ನಿರ್ವಹಣೆಗಾಗಿ ಉಪಯೋಗಿಸತಕ್ಕದ್ದು.(ಪರಿಶಿಷ್ಟ ಪಂಗಡ ಮತ್ತು ವರ್ಗದ ವ್ಯಕ್ತಿ/ ಸಂಘಟಣೆಗಳಿಗೆ ರಿಯಾಯಿತಿ ದರಗಳನ್ನು ನಿಗದಿಪಡಿಸತಕ್ಕದ್ದು)

d) ಸದರಿ ಮೊತ್ತವನ್ನು ಭವನದ ನಿರ್ವಹಣೆ ಮತ್ತು ಇನ್ನಿತರೇ ಸಂಬಂಧಿತ ಚಟುವಟಿಕೆಗಳಿಗೆ ಉಪಯೋಗಿಸತಕ್ಕದ್ದು.

7.

1	ಪಂಚಾಯತ್ ಅಭಿವೃದ್ಧಿ ಅಧಿಕಾರಿ(ಪಿಡಿಓ)	ಅಧ್ಯಕ್ಷರು
2	ಸಹಾಯಕ ಅಭಿಯಂತರರು, ಪಿಡಬ್ಲ್ಯೂಡಿ	ಸದಸ್ಯರು
3	ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ	ಸದಸ್ಯರು
4	ಕಾರ್ಯದರ್ಶಿ, ಗ್ರಾಮ ಪಂಚಾಯಿತಿ	ಸದಸ್ಯರು
6	ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ	ಸದಸ್ಯರು
7	ಜಿಲ್ಲೆಯ ತಹಶೀಲ್ದಾರ್‌ರವರಿಂದ ನಾಮನಿರ್ದೇಶಿತ 3 ವ್ಯಕ್ತಿಗಳು	ಸದಸ್ಯರು

8.1 ಸಮಿತಿಯ ಕರ್ತವ್ಯಗಳು:

a) ಭವನ ಕಾಮಗಾರಿಗಳ ಉಸ್ತುವಾರಿ ಮತ್ತು ಪ್ರತಿನಿತ್ಯದ ಮೇಲ್ವಿಚಾರಣೆ

b) ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು(ಭವನದ ಹೆಸರಿನಲ್ಲಿ ಮೇಲುಸ್ತುವಾರಿಗಾಗಿ)

c) ಜಿಲ್ಲಾ ಹಂತದ ಭವನದಲ್ಲಿ ನಡೆಯುವ ಸಭೆ ಸಮಾರಂಭಗಳಿಗೆ ವೆಚ್ಚವನ್ನು ನಿಗಧಿಪಡಿಸುವುದು ಮತ್ತು ಸದರಿ ಮೊತ್ತವನ್ನು ಭವನದ ನಿರ್ವಹಣೆಗಾಗಿ ಉಪಯೋಗಿಸತಕ್ಕದ್ದು.(ಪರಿಶಿಷ್ಟ ಪಂಗಡ ಮತ್ತು ವರ್ಗದ ವ್ಯಕ್ತಿ/ ಸಂಘಟಣೆಗಳಿಗೆ ರಿಯಾಯಿತಿ ದರಗಳನ್ನು ನಿಗದಿಪಡಿಸತಕ್ಕದ್ದು)

8. ಖಾಸಗಿ ವ್ಯಕ್ತಿ/ ಸಂಘಟಣೆ/ಸಂಘಗಳಿಗೆ ಸರ್ಕಾರದಿಂದ ಸಂಪೂರ್ಣ ಅನುದಾನ ಒದಗಿಸಿದಲ್ಲಿ ಅಂತಹ ಭವನಗಳ ನಿರ್ವಹಣೆ:

ಭವನ ನಿರ್ಮಾಣದ ಅಂದಾಜು ವೆಚ್ಚಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವ ಸಂದರ್ಭದಲ್ಲಿ ಷರತ್ತನ್ನು ವಿಧಿಸಬಹುದಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು / ಜಿಲ್ಲಾ ಸಮಾಜ ಕಲ್ಯಾಣಧಿಕಾರಿ/ತಾಲ್ಲೂಕು ಸಮಾಜ ಕಲ್ಯಾಣಧಿಕಾರಿ ಇಂತಹ ಸಮಿತಿಗಳಲ್ಲಿ ಒಳಗೊಂಡಿರತಕ್ಕದ್ದು.

****

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳ ಕಟ್ಟಡ, ಶಾಲಾ-ಕಾಲೇಜುಗಳ ಕಟ್ಟಡ ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ನೀಡುವ ಕುರಿತು ಪರಿಷ್ಕೃತ ಮಾರ್ಗಸೂಚಿಗಳು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಕಇ 159 ಪಕವಿ 2011, ದಿನಾಂಕ: 06-03-2012

2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ:ಸಕನಿ/ಪಿಎಸ್-3/ಸಿಆರ್-09/2013-14, ದಿನಾಂಕ: 03-10-2013.

****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಖಾಸಗಿ ಸಂಸ್ಥೆಗಳಿಗೆ ಅನುದಾನಿತ ವಸತಿ ನಿಲಯಗಳ ಕಟ್ಟಡ ನಿರ್ಮಾಣ/ ವಿಸ್ತರಣೆ/ ರಿಪೇರಿ/ ವಿಸ್ತರಣಾ ಕಾರ್ಯಗಳಿಗೆ ಅಂದಾಜು ಮೊತ್ತದ 75% ರಷ್ಟು ಅಥವಾ 25 ಲಕ್ಷ, ಇವುಗಳಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ಅನುದಾನವಾಗಿ ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

2013-14ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಸಂಸ್ಥೆಗಳು ನಡೆಸುವ ವಿದ್ಯಾರ್ಥಿ ನಿಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು, ಸಮುದಾಯ ಭವನಗಳ ನಿರ್ಮಾಣ ಇತ್ಯಾದಿಗಳಿಗೆ ಆರ್ಥಿಕ ನೆರವು ನೀಡಲು ರೂ.50.00 ಕೋಟಿಗಳನ್ನು ಒದಗಿಸಲಾಗುವುದೆಂದು ಘೋಷಿಸಲಾಗಿರುತ್ತದೆ.

2014-15 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಹಾಗೂ ಇತರೆ ಸಂಘ-ಸಂಸ್ಥೆಗಳು ನಡೆಸುವ ಶೈಕ್ಷಣಿಕ ಸಂಸ್ಥೆಗಳಿಗೆ ಶಾಲೆ, ಮತ್ತು ವಿದ್ಯಾರ್ಥಿ ನಿಲಯ ಕಟ್ಟಡಗಳಿಗೆ ಮತ್ತು ಸಮುದಾಯ ಭವನಗಳಿಗಾಗಿ ಆರ್ಥಿಕ ನೆರವು ನೀಡಲಾಗುವುದೆಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (2) ರ ಪತ್ರದಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಪರಿಶಿಷ್ಟ ಜಾತಿಯ ಧಾರ್ಮಿಕ ಸಂಸ್ಥೆಗಳು ನಡೆಸುವ ವಿದ್ಯಾರ್ಥಿ ನಿಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು, ಸಮುದಾಯ ಭವನಗಳ ನಿರ್ಮಾಣ ಇತ್ಯಾದಿಗಳಿಗೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳು/ಶಾಲಾ ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಮಂಜೂರಾತಿ ನೀಡುವ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಸಕಇ 44 ಪಕವಿ 2014, ಬೆಂಗಳೂರು ದಿನಾಂಕ: 15-05-2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳು/ಶಾಲಾ-ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕಾಗಿ ಸಹಾಯಧನ ನೀಡುವ ಕುರಿತು ಅನುಬಂಧ (1), (2), (3) ಮತ್ತು (4) ರಲ್ಲಿ ಲಗತ್ತಿಸಿರುವಂತೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಸದರಿ ಮಾರ್ಗಸೂಚಿಗಳು ಈ ತಕ್ಷಣದಿಂದ ಜಾರಿಗೆ ಬರುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 121 ವೆಚ್ಚ-3/2014, ದಿನಾಂಕ: 13-03-2014 ರಲ್ಲಿ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು, ಇವರಿಗೆ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, 5,000 ಪ್ರತಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, 2ನೇ ಮಹಡಿ ವಿಕಾಸಸೌಧ, ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
4) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.
6) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ಎಲ್ಲಾ ಜಿಲ್ಲಾಧಿಕಾರಿಗಳು.
8) ಎಲ್ಲಾ ಜಿಲ್ಲೆಗಳ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು.
9) ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು.
(ಕ್ರ.ಸಂ.7, 8 ಮತ್ತು 9 ನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮುಖಾಂತರ).
10) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
11) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ.
12) ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರು.
13) ಶಾಖಾ ರಕ್ಷಾ ಕಡತ.
14) ಹೆಚ್ಚುವರಿ ಪ್ರತಿಗಳು-03

ಅನುಬಂಧ-1

ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳು/ಶಾಲಾ-ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಮಾರ್ಗಸೂಚಿಗಳು :

1. ಅರ್ಹತೆ:

ಈ ಕಾರ್ಯಕ್ರಮದಡಿ ಸಹಾಯಧನ ಪಡೆಯಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನೋಂದಣಿಯಾಗಿರುವ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ಅರ್ಹರಿರುತ್ತವೆ.

2. ಸಹಾಯಧನ ಮಂಜೂರಾತಿಗಾಗಿ ನಿಬಂಧನೆಗಳು:

1. ಸಹಾಯಧನ ಪಡೆಯುವ ಸಂಸ್ಥೆಯು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯ್ದೆಯನ್ವಯ/ನೋಂದಣಿ ನಿಯಮಗಳನ್ವಯ ನೋಂದಾಯಿತ ಸಂಸ್ಥೆಯಾಗಿರಬೇಕು. ಸಂಸ್ಥೆಯು ನೋಂದಣಿಯಾಗಿ ಕನಿಷ್ಠ ಮೂರು ವರ್ಷಗಳಾಗಿರಬೇಕು.
2. ಟ್ರಸ್ಟಿನ ಸದಸ್ಯರು ಒಂದೇ ಕುಟುಂಬದವರಾಗಿರಬಾರದು.
3. ಸಹಾಯಧನ ಪಡೆಯುವ ಸಂಸ್ಥೆಯು ಹಿಂದಿನ ಮೂರು ವರ್ಷಗಳ ಆಡಿಟ್ ವರದಿಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆಡಿಟ್ ಮಾಡಿಸಿ ಅರ್ಜಿಯೊಂದಿಗೆ ಸಲ್ಲಿಸಬೇಕು.
4. ಉದ್ದೇಶಿತ ವಿದ್ಯಾರ್ಥಿ ನಿಲಯ/ಶಾಲಾ ಕಾಲೇಜು-ಕಟ್ಟಡ/ಸಮುದಾಯ ಭವನ ಕಟ್ಟಡದ ಅಂದಾಜು ಪಟ್ಟಿಯಲ್ಲಿ ಶೇಕಡ 75 ರಷ್ಟು ಅಥವಾ ಗರಿಷ್ಠ ರೂ.50.00 ಲಕ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಸರ್ಕಾರದಿಂದ ಸಹಾಯಧನ ನೀಡಬಹುದಾಗಿದ್ದು, ಉಳಿದ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಯು ಭರಿಸತಕ್ಕದ್ದು.
5. ಸಹಾಯಧನ ಪಡೆಯುವ ಸಂಸ್ಥೆಗಳು/ಟ್ರಸ್ಟ್‌ಗಳು ಉದ್ದೇಶಿಸಿರುವ ಕಟ್ಟಡ ನಿರ್ಮಾಣಕ್ಕೆ ಅವರ ಸಂಸ್ಥೆಯ ಹೆಸರಿನಲ್ಲಿ ಜಮೀನು/ನಿವೇಶನವನ್ನು ಹೊಂದಿರಬೇಕು ಅಥವಾ ಇತರ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಿಂದ ಕನಿಷ್ಠ ಮೂವತ್ತು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಗುತ್ತಿಗೆ(ಲೀಸ್) ಪಡೆದಿರಬೇಕು.
6. ಕಟ್ಟಡ ನಕ್ಷೆಗೆ ಸ್ಥಳೀಯ ನಗರಪಾಲಿಕೆ/ನಗರಸಭೆ/ಪುರಸಭೆ/ಪಂಚಾಯಿತಿಯಿಂದ ಅನುಮೋದನೆ ಮತ್ತು ಪರವಾನಗಿಯನ್ನು ಪಡೆದಿರಬೇಕು ಹಾಗೂ ಅಂದಾಜು ಪಟ್ಟಿಯು ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ/ಕಾರ್ಯಪಾಲಕ ಅಭಿಯಂತರರಿಂದ ದೃಢೀಕರಣಗೊಂಡಿರಬೇಕು.
7. ಸಮುದಾಯ ಭವನಗಳ ನಿರ್ಮಾಣಕ್ಕೆ ಮಾತ್ರ ಸಂಬಂಧಿಸಿದ ಪ್ರಕರಣಗಳಲ್ಲಿ ಈ ಕೆಳಗಿನ ಪ್ರದೇಶ/ಸ್ಥಳಗಳಿಗೆ ಈ ಕೆಳಗಿನ ಗರಿಷ್ಠ ಮಿತಿಗೊಳಪಟ್ಟು ಸಹಾಯಧನ ಮಂಜೂರು ಮಾಡಲಾಗುವುದು.

ಕ್ರ.ಸಂ.	ಸ್ಥಳ	ಗರಿಷ್ಠ ಸಹಾಯಧನ
1.	ಪಟ್ಟಣ ಪಂಚಾಯತಿ/ಗ್ರಾಮ ಪಂಚಾಯತಿ	ರೂ.10.00 ಲಕ್ಷ
2.	ತಾಲ್ಲೂಕು ಕೇಂದ್ರ ಸ್ಥಾನ	ರೂ.25.00 ಲಕ್ಷ
3.	ಜಿಲ್ಲಾ ಕೇಂದ್ರ ಸ್ಥಾನ	ರೂ.50.00 ಲಕ್ಷ

-----2

8. ಸಹಾಯಧನ ಪಡೆಯಲಿಚ್ಛಿಸುವ ಸಂಸ್ಥೆಯು ಅನುಬಂಧ-2ರ ಅರ್ಜಿ ನಮೂನೆಯಲ್ಲಿ ನಿಗಧಿತ ದಾಖಲಾತಿಯೊಂದಿಗೆ ಅರ್ಜಿಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
9. ಒಂದು ಸಂಘ ಅಥವಾ ಸಂಸ್ಥೆಯು ಈ ಕಾರ್ಯಕ್ರಮದಡಿ ಒಂದು ಬಾರಿ ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ.
10. ಸಹಾಯಧನ ಮಂಜೂರು ಆದೇಶ ಮಾಡಿದ ಕೂಡಲೇ ಸದರಿ ಸಂಸ್ಥೆಯು ಅನುಬಂಧ-3 ರಲ್ಲಿರುವಂತೆ ಕನಿಷ್ಠ ರೂ.100/- ರ ಛಾಪಾ ಕಾಗದದಲ್ಲಿ ಮಾಡಿದ ಪ್ರಮಾಣ ಪತ್ರವನ್ನು ಸಂಬಂಧಿಸಿದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
11. ಸಂಬಂಧಿಸಿದ ಸಂಸ್ಥೆಗೆ ಜಿಲ್ಲಾಧಿಕಾರಿಗಳ ಮೂಲಕ ಕಟ್ಟಡದ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಮೂರು ಕಂತುಗಳಲ್ಲಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು (ಮಂಜೂರಾತಿ ಆದೇಶದೊಂದಿಗೆ, ಮೇಲ್ಛಾವಣಿ ಮತ್ತು ಮುಕ್ತಾಯದ ನಂತರ, 25:50:25 ರ ಅನುಪಾತದಂತೆ).
12. ಕಟ್ಟಡ ನಿರ್ಮಾಣಕ್ಕೆ ಮೊದಲನೇ ಕಂತಿನ ಸಹಾಯಧನ ಪಡೆದ ದಿನಾಂಕದಿಂದ ನಾಲ್ಕು ತಿಂಗಳೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸದಿದ್ದಲ್ಲಿ, ಬಿಡುಗಡೆ ಮಾಡಲಾಗಿದ್ದ ಪೂರ್ಣ ಮೊತ್ತವನ್ನು ಸಂಸ್ಥೆಯಿಂದ ಜಿಲ್ಲಾಧಿಕಾರಿಗಳು ಹಿಂದಕ್ಕೆ ಪಡೆಯತಕ್ಕದ್ದು.
13. ಕಟ್ಟಡ ನಿರ್ಮಾಣಕ್ಕೆ ಮೊದಲನೇ ಕಂತಿನ ಸಹಾಯಧನ ಪಡೆದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ ನಿರ್ಮಾಣವನ್ನು ಪೂರ್ಣಗೊಳಿಸತಕ್ಕದ್ದು. ಎರಡು ವರ್ಷಗಳೊಳಗಾಗಿ ಕಟ್ಟಡವನ್ನು ಪೂರ್ಣಗೊಳಿಸದಿದ್ದಲ್ಲಿ, ಇದುವರೆಗೆ ಮಂಜೂರು ಮಾಡಿದ ಮೊತ್ತವನ್ನು ಮತ್ತು ಅದರ ಮೇಲೆ ಶೇ.10 ರಷ್ಟು ಬಡ್ಡಿಯನ್ನು ಸಂಬಂಧಪಟ್ಟ ಸಂಸ್ಥೆಯಿಂದ ವಸೂಲು ಮಾಡಲಾಗುವುದು. ಆದರೆ, ಸಂಸ್ಥೆಯು ನೀಡುವ ವಿವರಣೆಯನ್ನು ಪರಿಶೀಲಿಸಿ ಕಟ್ಟಡ ನಿರ್ಮಾಣಕ್ಕೆ ಹೆಚ್ಚುವರಿ ಕಾಲಾವಕಾಶವನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ನೀಡಬಹುದು. ಆದರೆ, ಇದು ಒಟ್ಟಾರೆ 3 ವರ್ಷಗಳಿಗೆ ಮೀರಿರಬಾರದು.
14. ಕಟ್ಟಡದ ಕಾಮಗಾರಿಯ ಪ್ರಗತಿಯ ಬಗ್ಗೆ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ವರದಿಯನ್ನು ಎಂಟು ವಿವಿಧ ಕೋನಗಳಿಂದ ತೆಗೆದ ಛಾಯಾಚಿತ್ರಗಳ ಸಮೇತ ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಪ್ರತಿ ತ್ರೈಮಾಸಿಕದ ಕೊನೆಗೆ ಸಲ್ಲಿಸಬೇಕು.
15. ಸಮುದಾಯ ಭವನದ ಕಟ್ಟಡಗಳನ್ನು ಸಮುದಾಯದ ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. ರಾಜಕೀಯ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.
16. ಪರಿಶಿಷ್ಟ ಜಾತಿಗೆ ಸೇರಿದ ಸಂಸ್ಥೆಯ ಸಮುದಾಯ ಭವನದ ಕಟ್ಟಡವನ್ನು ಸಾಮಾಜಿಕ/ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೊದಲನೇ ಆದ್ಯತೆಯಾಗಿ ಪರಿಶಿಷ್ಟ ಜಾತಿಯವರಿಗೆ, ಎರಡನೇ ಆದ್ಯತೆಯಾಗಿ ಪರಿಶಿಷ್ಟ ವರ್ಗದವರಿಗೆ ಹಾಗೂ ಮೂರನೇ ಆದ್ಯತೆಯಾಗಿ ಇತರೆ ಸಮುದಾಯದವರಿಗೂ ರಿಯಾಯಿತಿ ದರದಲ್ಲಿ ನೀಡತಕ್ಕದ್ದು. ಹಾಗೆಯೇ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಮುದಾಯ ಭವನದ ಕಟ್ಟಡವನ್ನು ಸಾಮಾಜಿಕ/ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೊದಲನೇ ಆದ್ಯತೆಯಾಗಿ ಪರಿಶಿಷ್ಟ ಪಂಗಡದವರಿಗೆ, ಎರಡನೇ ಆದ್ಯತೆಯಾಗಿ ಪರಿಶಿಷ್ಟ ಜಾತಿಯವರಿಗೆ ಹಾಗೂ ಮೂರನೇ ಆದ್ಯತೆಯಾಗಿ ಇತರೆ ಸಮುದಾಯದವರಿಗೂ ರಿಯಾಯಿತಿ ದರದಲ್ಲಿ ನೀಡತಕ್ಕದ್ದು.

17. ನಿರ್ಮಾಣ ಮಾಡಿರುವ ಕಟ್ಟಡದಿಂದ ಬರುವ ಆದಾಯದ ಬಗ್ಗೆ ಸೂಕ್ತ ಲೆಕ್ಕಪತ್ರಗಳನ್ನು
ನಿರ್ವಹಿಸಬೇಕು ಮತ್ತು ಇದನ್ನು ಸಂಘ/ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ
ಸಾರ್ವಜನಿಕರ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು. ಈ ರೀತಿ ಮಾಡುತ್ತಿರುವ ಬಗ್ಗೆ
ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಪರಿಶಿಷ್ಟ ವರ್ಗಗಳ
ಕಲ್ಯಾಣಾಧಿಕಾರಿಗಳು ಪ್ರತಿ 6 ತಿಂಗಳಿಗೊಮ್ಮೆ ಭೇಟಿ ನೀಡಿ ಪರಿಶೀಲನೆ ಮಾಡಬೇಕು.

18. ಶಾಲಾ-ಕಾಲೇಜು ಕಟ್ಟಡ/ವಿದ್ಯಾರ್ಥಿ ನಿಲಯ/ಸಮುದಾಯ ಭವನದ ಕಟ್ಟಡವನ್ನು ಕಟ್ಟಿದ
ನಂತರ ಸಂಸ್ಥೆಯು ಉಪಯೋಗಿಸದೇ ಸತತವಾಗಿ ಒಂದು ವರ್ಷ ಖಾಲಿ ಬಿಟ್ಟಲ್ಲಿ ಅಥವಾ
ಸರಿಯಾದ ರೀತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸದೇ ಇದ್ದಲ್ಲಿ, ಅದರಿಂದ ಬರುವ
ಆದಾಯವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸದೇ ಇದ್ದಲ್ಲಿ, ಇಲಾಖೆಯು ಸದರಿ ಶಾಲಾ-
ಕಾಲೇಜು ಕಟ್ಟಡ/ಸಮುದಾಯ ಭವನ/ವಿದ್ಯಾರ್ಥಿ ನಿಲಯವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ
ಅಧಿಕಾರವನ್ನು ಹೊಂದಿರುತ್ತದೆ.

19. ಈ ಮೇಲಿನ ಸಹಾಯಧನದಿಂದ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿದಲ್ಲಿ, ಪ್ರವೇಶ ನೀಡುವ
ವಿದ್ಯಾರ್ಥಿಗಳ ಪೈಕಿ ಶೇ.50 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ
ವಸತಿ ಸೌಲಭ್ಯವನ್ನು ನೀಡಬೇಕು. ಶಾಲಾ-ಕಾಲೇಜು ನಿರ್ಮಿಸಿದಲ್ಲಿ, ಪರಿಶಿಷ್ಟ ಜಾತಿ ಮತ್ತು
ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆದ್ಯತೆ ಮೇಲೆ ಪ್ರವೇಶ ನೀಡಬೇಕು. ಈ ಸಂಸ್ಥೆಗಳ
ನೇಮಕಾತಿಯಲ್ಲಿ ಶೇಕಡಾ 50 ರಷ್ಟು ಹುದ್ದೆಗಳನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ
ಮೀಸಲಿರಿಸಬೇಕು.

3. <u>ಇಲಾಖಾಧಿಕಾರಿಗಳಿಗೆ ಸೂಚನೆಗಳು:-</u>

1. ಈ ಕೆಳಗೆ ನಮೂದಿಸಿರುವ ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವನ್ನು ಈ
ಕೆಳಗಿನವರಿಗೆ ಈ ಕೆಳಗಿನಂತೆ ವಹಿಸಲಾಗಿದೆ.

ಅ. ರೂ.10.00 ಲಕ್ಷಗಳವರೆಗೆ	- ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.
ಆ. ರೂ.10.00 ಲಕ್ಷಗಳ ಮೇಲ್ಪಟ್ಟು ಹಾಗೂ ಗರಿಷ್ಠ 50.00 ಲಕ್ಷಗಳವರೆಗೆ	- ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ

ಇ. ರೂ.50.00 ಲಕ್ಷಗಳಿಗೆ ಮೇಲ್ಪಟ್ಟ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ಅಭಿಪ್ರಾಯಕ್ಕೆ
ಸಲ್ಲಿಸುವುದು.

2. ಈ ಕಾರ್ಯಕ್ರಮದಡಿ ಸರ್ಕಾರದಿಂದ ಬಿಡುಗಡೆಯಾಗುವ ಮೊತ್ತವನ್ನು ಆಯುಕ್ತರು, ಸಮಾಜ
ಕಲ್ಯಾಣ ಇಲಾಖೆ/ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಪಿ.ಡಿ.ಖಾತೆಗೆ ಜಮಾ
ಮಾಡಿಕೊಂಡು, ಪ್ರಗತಿಗೆ ಅನುಗುಣವಾಗಿ ಸಹಾಯಧನವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ
ಮರು ಬಿಡುಗಡೆ ಮಾಡಬೇಕು.

3. ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ
ವಿದ್ಯಾರ್ಥಿ ನಿಲಯಗಳು/ಶಾಲಾ-ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡ
ನಿರ್ಮಾಣಕ್ಕಾಗಿ ಸಲ್ಲಿಸುವ ಪ್ರಸ್ತಾವನೆಯು ಸಂಬಂಧ ಜಿಲ್ಲೆಯ ಜಿಲ್ಲಾ ಸಮಾಜ

ಕಲ್ಯಾಣಾಧಿಕಾರಿಗಳು / ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ತಮ್ಮ ಶಿಫಾರಸ್ಸಿನೊಂದಿಗೆ (ಚೆಕ್‌ಲಿಸ್ಟ್ ನಮೂನೆಯೊಂದಿಗೆ) ಮತ್ತು ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸಬೇಕು. ಆಯುಕ್ತರು/ ನಿರ್ದೇಶಕರು ಪ್ರಸ್ತಾವನೆಯನ್ನು ಅವರಿಗೆ ಪ್ರದತ್ತವಾದ ಆರ್ಥಿಕ ಅಧಿಕಾರ ಪರಿಮಿತಿಯೊಳಗೆ ಸಹಾಯಧನವನ್ನು ಮಂಜೂರು ಮಾಡಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವುದು. ಆಯುಕ್ತರು/ನಿರ್ದೇಶಕರಿಗೆ ಪ್ರದತ್ತವಾದ ಆರ್ಥಿಕ ಮಿತಿ ಮೀರಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

4. ಸಹಾಯಧನವನ್ನು ಮಂಜೂರು ಮಾಡಿದ ಸಂಸ್ಥೆಗೆ ಬಿಡುಗಡೆ ಮಾಡುವ ಮುಂಚೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಸಂಸ್ಥೆಯಿಂದ ಅನುಬಂಧ-3 ರಲ್ಲಿರುವಂತೆ ಕನಿಷ್ಠ ರೂ.100/- ಗಳ ಛಾಪಾ ಕಾಗದದಲ್ಲಿ ಕರಾರು ಪತ್ರವನ್ನು ಪಡೆಯಬೇಕು.

5. ನಿರ್ಮಾಣ ಮಾಡಿರುವ ಕಟ್ಟಡದಿಂದ ಬರುವ ಆದಾಯದ ಬಗ್ಗೆ ಸೂಕ್ತ ಲೆಕ್ಕಪತ್ರಗಳನ್ನು ನಿರ್ವಹಿಸುವ ಬಗ್ಗೆ ಹಾಗೂ ಇದನ್ನು ಸಂಘ ಅಥವಾ ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಸಾರ್ವಜನಿಕರ ಉದ್ದೇಶಕ್ಕಾಗಿ ಮಾತ್ರ ಬಳಸುತ್ತಿರುವ ಬಗ್ಗೆ ವಿದ್ಯಾರ್ಥಿ ನಿಲಯವಾಗಿದ್ದಲ್ಲಿ ಮೀಸಲಾತಿ ಪ್ರಕಾರ ಪ್ರವೇಶ ನೀಡಿರುವ ಬಗ್ಗೆ ಉಚಿತವಾಗಿ ವಸತಿ ಸೌಲಭ್ಯ ನೀಡಿರುವ ಬಗ್ಗೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರತಿ 6 ತಿಂಗಳಿಗೊಮ್ಮೆ ಸಂಘ/ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ಮಾಡಬೇಕು ಮತ್ತು ಈ ಬಗ್ಗೆ ವರದಿಯನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸಬೇಕು.

5. ಕಟ್ಟಡವನ್ನು ಕಟ್ಟಿದ ನಂತರ ಸಂಸ್ಥೆಯು ಉಪಯೋಗಿಸದೇ ಸತತವಾಗಿ ಒಂದು ವರ್ಷ ಖಾಲಿ ಬಿಟ್ಟಿದ್ದಲ್ಲಿ ಅಥವಾ ಸೂಕ್ತವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸದೇ ಇದ್ದಲ್ಲಿ, ಅದರಿಂದ ಬರುವ ಆದಾಯವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸದೇ ಇದ್ದಲ್ಲಿ, ಇಲಾಖೆಯು ಸದರಿ ಶಾಲಾ-ಕಾಲೇಜು ಕಟ್ಟಡ/ಸಮುದಾಯ ಭವನದ ಕಟ್ಟಡ /ವಿದ್ಯಾರ್ಥಿ ನಿಲಯದ ಕಟ್ಟಡವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು.

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಅನುಬಂಧ - 2

ಅರ್ಜಿ ನಮೂನೆ

ಸಮಾಜ ಕಲ್ಯಾಣ ಇಲಾಖೆ

(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೋಂದಾಯಿತ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳ/ಶಾಲಾ ಕಾಲೇಜುಗಳ/ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕಾಗಿ ಸಹಾಯಧನ ನೆರವು ನೀಡಲು ಸಲ್ಲಿಸಬೇಕಾದ ಅರ್ಜಿ ನಮೂನೆ)

ಗೆ,

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ

------------------------ ಜಿಲ್ಲೆ

ಮಾನ್ಯರೆ,

ವಿಷಯ:-------------------- ನಗರ/ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೋಂದಾಯಿತ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳ/ಶಾಲಾ ಕಾಲೇಜುಗಳ/ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕಾಗಿ ಸಹಾಯಧನ ಮಂಜೂರು ಮಾಡುವ ಬಗ್ಗೆ.

ಕ್ರ.ಸಂ.	ವಿವರ	ಉತ್ತರ
1	ಸಂಸ್ಥೆಯ ಪೂರ್ಣ ಹೆಸರು ಮತ್ತು ವಿಳಾಸ	
2	ಸಂಸ್ಥೆಯು ನೋಂದಣಿಯಾದ ವರ್ಷ ಮತ್ತು ಆದೇಶ ಸಂಖ್ಯೆ (ನೋಂದಣಿ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು).	
3	ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಹೆಸರು ಹಾಗೂ ಪೂರ್ಣ ವಿಳಾಸ (ಮಾಹಿತಿ ಲಗತ್ತಿಸುವುದು)	
4	ಸಂಸ್ಥೆಯು ಬೈಲಾಗಳನ್ನು ಅಳವಡಿಸಿಕೊಂಡಿದೆಯೇ? (ಬೈಲಾ ಪ್ರತಿ ಲಗತ್ತಿಸುವುದು).	
5	ಸಂಸ್ಥೆಯ ಕಳೆದ 3 ವರ್ಷಗಳ ವಾರ್ಷಿಕ ಲೆಕ್ಕಪತ್ರ/ಆಡಿಟ್ ವರದಿಯನ್ನು ಲಗತ್ತಿಸುವುದು.	
6	ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ನಡೆಸಿದ ವಿದ್ಯಾರ್ಥಿ ನಿಲಯಗಳು/ಶಾಲಾ-ಕಾಲೇಜುಗಳು ಮತ್ತು ಸಮುದಾಯ ಭವನಗಳ ಕಟ್ಟಡ ನಿರ್ಮಾಣಗಳಿಗೆ ಆರ್ಥಿಕ ನೆರವು ನೀಡಲು ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ಬಗ್ಗೆ ವರದಿ.	

.....2

7	ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳು/ಶಾಲಾ-ಕಾಲೇಜುಗಳ ಕಟ್ಟಡ/ಸಮುದಾಯ ಭವನಗಳ ನಿರ್ಮಾಣಗಳಿಗೆ ಆರ್ಥಿಕ ನೆರವು ನೀಡುವ ಉದ್ದೇಶಕ್ಕಾಗಿ ಸ್ವಂತ ಜಮೀನು ಹೊಂದಿದೆಯೇ? (ಇದ್ದರೆ ಅದರ ವಿವರ ನಮೂದಿಸುವುದು) ಸಂಸ್ಥೆಯು ಸ್ವಂತವಾಗಿ ಹೊಂದಿರುವ ನಿವೇಶನ/ ಜಮೀನಿನ ವಿವರ.	
8	ಜಮೀನನ್ನು ಸರ್ಕಾರದಿಂದ ಲೀಸ್ ಪಡೆಯಲಾಗಿದೆಯೇ? ಲೀಸ್‌ಗೆ ಪಡೆಯಲಾಗಿದ್ದಲ್ಲಿ ಅದರ ದಾಖಲೆ ಮತ್ತು ವಿವರ.	
9	ಜಮೀನಿಗೆ ಸಂಬಂಧಿಸಿದ ಖಾತಾ ಮತ್ತು ಋಣಭಾರ ಪ್ರಮಾಣ ಪತ್ರ (ರಿಜಿಸ್ಟರ್ ಡೀಡ್) ಲಗತ್ತಿಸಲಾಗಿದೆಯೇ?	
10	ಪ್ರಸ್ತಾಪಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಕ್ಷೆ ಮತ್ತು ಒಟ್ಟು ಅಂದಾಜು ಪಟ್ಟಿ (ಅಧಿಕೃತ ಅಭಿಯಂತರರಿಂದ ಅನುಮೋದಿಸಲ್ಪಟ್ಟಿರಬೇಕು)	
11	ಪ್ರಸ್ತಾಪಿಸಿದ ಕಾಮಗಾರಿಗಳಿಗೆ ಸಂಸ್ಥೆಯು ಸ್ಥಳೀಯ ಸಂಸ್ಥೆಗಳಿಂದ/ಸಕ್ಷಮ ಪ್ರಾಧಿಕಾರದಿಂದ ಪರವಾನಗಿ ಪಡೆಯಲಾಗಿದೆಯೇ? (ಮಾಹಿತಿ ಲಗತ್ತಿಸುವುದು).	
12	ಕಾಮಗಾರಿಗಳ ಒಟ್ಟು ವೆಚ್ಚದಲ್ಲಿ ಸರ್ಕಾರದ ಅನುದಾನದ ಹೊರತು ಬಾಕಿ ಮೊತ್ತವನ್ನು ಭರಿಸುವ ಮೂಲಗಳ ವಿವರ.	
13	ಸಂಸ್ಥೆಯು ನಡೆಸುತ್ತಿರುವ ವಿದ್ಯಾಸಂಸ್ಥೆಗಳ ವಿವರ (ಈ ವಿದ್ಯಾಸಂಸ್ಥೆಗಳ ಬಗ್ಗೆ ಕೇಂದ್ರ/ರಾಜ್ಯ ಸರ್ಕಾರದ ಅನುಮತಿ ಪಡೆದಿರುವ ಬಗ್ಗೆ ದಾಖಲಾತಿ) ವಿದ್ಯಾರ್ಥಿ ನಿಲಯವಾಗಿದ್ದಲ್ಲಿ, ವಿದ್ಯಾರ್ಥಿ ನಿಲಯ ನಡೆಸಲು ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮತಿ ಪತ್ರ ಒದಗಿಸುವುದು. ಶೈಕ್ಷಣಿಕ ಸಂಸ್ಥೆಯಾಗಿದ್ದಲ್ಲಿ, ಶೈಕ್ಷಣಿಕ ಕೋರ್ಸುಗಳನ್ನು ನಡೆಸಲು ಶಿಕ್ಷಣ ಇಲಾಖೆಯಿಂದ ಅಥವಾ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮತಿ ಪತ್ರ ಒದಗಿಸುವುದು.	

ಮೇಲ್ಕಂಡ ವಿವರಗಳಂತೆ ನಾನು/ನಾವುಗಳು ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನೋಂದಾಯಿತ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳ/ಶಾಲಾ ಕಾಲೇಜುಗಳ/ ಸಮುದಾಯ ಭವನಗಳ ಕಟ್ಟಡ ನಿರ್ಮಾಣಗಳಿಗೆ ನೀಡುವ ಆರ್ಥಿಕ ನೆರವು, ಅಡಿಯಲ್ಲಿ ಮೇಲ್ಕಂಡ ಉದ್ದೇಶಕ್ಕೆ ರೂ.----------- ಅನುದಾನ ಮಂಜೂರು ಮಾಡಬೇಕೆಂದು ಕೋರುತ್ತೇನೆ/ವೆ.

ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುತ್ತಿದ್ದೇವೆ

1. ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ
2. ಸಂಘ ಸಂಸ್ಥೆಗಳ ಕಾಯ್ದೆ ಮತ್ತು ನಿಯಮಗಳನ್ವಯ ನೋಂದಣಿ ದೃಢೀಕರಣ ಪತ್ರ
3. ಬೈಲಾ ಪ್ರತಿ
4. ಕಾರ್ಯಕಾರಿ ಮಂಡಳಿಯ ಸದಸ್ಯರ ಪಟ್ಟಿ ಮತ್ತು ವಿಳಾಸ
5. ಸರ್ಕಾರದಿಂದ ಅನುದಾನ ಪಡೆಯುವ ಬಗ್ಗೆ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ನಡವಳಿಗಳು.
6. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯ ಕುರಿತಂತೆ ಕಳೆದ 3 ವರ್ಷಗಳ ಲೆಕ್ಕಪತ್ರ/ಆಡಿಟ್ ವರದಿ (ಚಾರ್ಟರ್ಡ್ ಅಕೌಂಟೆಂಟ್ ದೃಢೀಕರಿಸಬೇಕು).
7. ಸ್ಥಳೀಯ ಸಂಸ್ಥೆಗಳಿಂದ ಕಟ್ಟಡದ/ನಕ್ಷೆಗೆ (ಮೂಲ ಪ್ರತಿ) ಪಡೆದ ಪರವಾನಗಿ.
8. ಅಧಿಕೃತ ಅಭಿಯಂತರರಿಂದ ದೃಢೀಕರಿಸಿದ ಅಂದಾಜು ಪಟ್ಟಿಯ ಪ್ರತಿ.
9. ಸಂಸ್ಥೆಯ ಹೆಸರಿನಲ್ಲಿ ಜಮೀನು ಹೊಂದಿರುವ ಬಗ್ಗೆ ಖಾತಾ ಪ್ರತಿ ಹಾಗೂ ಈವರೆಗೆ ಕಂದಾಯ ಪಾವತಿಸಿರುವ ಬಗ್ಗೆ ರಶೀದಿ ಪ್ರತಿಗಳು.

1. ಸಂಸ್ಥೆಯು ನಡೆಸುವ ವಿದ್ಯಾರ್ಥಿ ನಿಲಯದ ಕಟ್ಟಡ/ಶಾಲಾ-ಕಾಲೇಜು ಕಟ್ಟಡ/ಸಮುದಾಯ ಭವನ ಕಟ್ಟಡ ನಿರ್ಮಾಣಗಳಿಗೆ ಆರ್ಥಿಕ ನೆರವು ನೀಡುವ ಸಂಬಂಧ ಸರ್ಕಾರದ ಅನುದಾನ ಪಡೆಯುವ ಸಲುವಾಗಿ ಮೇಲೆ ತಿಳಿಸಿದ ವಿವರಗಳು ಸತ್ಯವಾಗಿರುತ್ತವೆಯೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.
2. ನೋಂದಾಯಿತ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳು, ಶಾಲಾ ಕಾಲೇಜುಗಳು ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣಗಳಿಗೆ ಆರ್ಥಿಕ ನೆರವು ನೀಡುವ ಅನುದಾನವನ್ನು ಕಲ್ಪಿಸಲು ನಿಗದಿತ ಉದ್ದೇಶಕ್ಕೆ ಉಪಯೋಗಿಸಲಾಗುವುದೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.
3. ಮಂಜೂರಾದ ನಂತರ ಅನುಬಂಧ-3 ರಂತೆ ಕರಾರು ಪತ್ರವನ್ನು ಸಲ್ಲಿಸಲಾಗುವುದು.

ದಿನಾಂಕ:

ತಮ್ಮ ವಿಶ್ವಾಸಿ,

ಸ್ಥಳ :

(ಅಧ್ಯಕ್ಷರು)

-----4

ಕಛೇರಿ ಉಪಯೋಗಕ್ಕಾಗಿ

1) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ ಇವರ ವರದಿಗಳು ಮತ್ತು ಶಿಫಾರಸ್ಸು ......

ಸಹಿ ಮತ್ತು ಪದನಾಮ

2) ಜಿಲ್ಲಾಧಿಕಾರಿಗಳ ಶಿಫಾರಸ್ಸು ....

ಸಹಿ ಮತ್ತು ಪದನಾಮ

(ಈ ಅರ್ಜಿಯನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುವುದು)

ಅನುಬಂಧ - 3

ಕರಾರು ಪತ್ರ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳ ಕಛೇರಿ ----------- ಜಿಲ್ಲೆ ಇವರಿಗೆ --

ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿ --

ಆದ ನಾನು/ನಾವು --

ತಾಲ್ಲೂಕಿನ--ಜಿಲ್ಲೆಯ --ಗ್ರಾಮದಲ್ಲಿ ನಮ್ಮ ಸಂಸ್ಥೆಯ ವತಿಯಿಂದ ನಡೆಸುವ ವಿದ್ಯಾರ್ಥಿ-ನಿಲಯ/ಶಾಲಾ-ಕಾಲೇಜು ಕಟ್ಟಡ/ಸಮುದಾಯ ಭವನದ ಕಟ್ಟಡ/ಇತರೆ ಕಾಮಗಾರಿಗಳಿಗಾಗಿ ರೂ.---------- ಲಕ್ಷಗಳ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲು ಅರ್ಜಿ ಸಲ್ಲಿಸಿದ್ದು, ಅನುದಾನ ಮಂಜೂರು ಮಾಡುವುದಕ್ಕೆ ಸಂಬಂಧಿಸಿದ ನಿಯಮಗಳನ್ವಯ ಈ ಕೆಳಕಂಡಂತೆ ಷರತ್ತುಗಳನ್ನು ಒಪ್ಪಿಕೊಂಡು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರ.

1.	ಮಂಜೂರು ಮಾಡಿರುವ ಅನುದಾನವನ್ನು ಉದ್ದೇಶಿತ ಕಾರ್ಯಕ್ಕೆ ಮಾತ್ರ ಉಪಯೋಗಿಸಲಾಗುವುದು
2.	ಸರ್ಕಾರದಿಂದ ಪಡೆಯುವ ಅನುದಾನ ಹೊರತುಪಡಿಸಿ ಕಟ್ಟಡ/ಕಾಮಗಾರಿಯ ಅಂದಾಜು ವೆಚ್ಚದ ಬಾಕಿ ಮೊಬಲಗನ್ನು ಸ್ವಂತ ಭರಿಸಿ ಕಟ್ಟಡ/ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು
3.	ಸರ್ಕಾರದ ಅನುದಾನ ಪಡೆದು ನಮ್ಮ ಸಂಸ್ಥೆಯಿಂದ ನಡೆಸುವ ವಿದ್ಯಾರ್ಥಿ ನಿಲಯ/ಶಾಲಾ-ಕಾಲೇಜು/ಸಮುದಾಯ ಭವನ ಕಟ್ಟಡವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರು ಉಪಯೋಗಿಸಲು ಬಯಸಿದಲ್ಲಿ ರಿಯಾಯಿತಿ ದರದಲ್ಲಿ ನೀಡಲು ಆದ್ಯತೆ ನೀಡಲಾಗುವುದು
4.	ಸರ್ಕಾರದಿಂದ ಅನುದಾನ ಪಡೆದು ನಡೆಸುವ ವಿದ್ಯಾರ್ಥಿ ನಿಲಯ/ಶಾಲಾ-ಕಾಲೇಜು/ಸಮುದಾಯ ಭವನಗಳ ಕಟ್ಟಡವನ್ನು ಯಾವುದೇ ರಾಜಕೀಯ ಚಟುವಟಿಕೆಗಳಿಗೆ ಉಪಯೋಗಿಸುವುದಿಲ್ಲ.
5.	ಒಂದು ವೇಳೆ ನಮ್ಮ ಸಂಸ್ಥೆಯು ನಡೆಸುವ ವಿದ್ಯಾರ್ಥಿ ನಿಲಯ/ಶಾಲಾ-ಕಾಲೇಜು/ಸಮುದಾಯ ಭವನಗಳ ಕಟ್ಟಡವನ್ನು ಸತತವಾಗಿ ಒಂದು ವರ್ಷದ ಕಾಲ ನಮ್ಮ ಸಂಸ್ಥೆಯು ಉಪಯೋಗಿಸದೇ ಇದ್ದಲ್ಲಿ ಸದರಿ ಕಟ್ಟಡವನ್ನು ಸಮಾಜ ಕಲ್ಯಾಣ ಇಲಾಖೆಯ ಸ್ವಾಧೀನಕ್ಕೆ ಬಿಟ್ಟು ಕೊಡಲು ಒಪ್ಪಿರುತ್ತೇನೆ.
6.	ಎರಡು ವರ್ಷದ ಒಳಗೆ ಅಥವಾ ಅಧಿಕೃತವಾಗಿ ಕಾಲಾವಕಾಶವನ್ನು ವಿಸ್ತರಿಸಿದ ಅವಧಿಯೊಳಗೆ ಕಟ್ಟಡ/ಕಾಮಗಾರಿಯನ್ನು ಪೂರ್ಣಗೊಳಿಸದೇ ಇದ್ದಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಶೇಕಡ 10% ರಷ್ಟು ಬಡ್ಡಿ ಸಹಿತ ಸರ್ಕಾರಕ್ಕೆ ವಾಪಸ್ಸು ಮಾಡಲು ಒಪ್ಪಿರುತ್ತೇನೆ

----2

7.	ಈ ಕರಾರಿನ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಸರ್ಕಾರವು ಸಂಸ್ಥೆಯ ವಿರುದ್ಧ ಕ್ರಮ ತೆಗೆದುಕೊಳ್ಳಬಹುದಾಗಿರುತ್ತದೆ
8.	ಈ ಕುರಿತು ಏನಾದರೂ ವ್ಯಾಜ್ಯ ಉದ್ಭವಿಸಿದ್ದಲ್ಲಿ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ

ಈ ಕರಾರನ್ನು -------------------- ವಾರ ---------------------------------- ನೇ ತಾರೀಖು --------------- ವರ್ಷ ದಂದು ಸಹಿ ಮಾಡಲಾಗಿದೆ.

ಸಹಿ

1) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ - ಹೆಸರು ಮತ್ತು ವಿಳಾಸ

2) ನೋಂದಾಯಿತ ಧಾರ್ಮಿಕ ಸಂಸ್ಥೆ/ಸಂಘ-ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ - - ಹೆಸರು ಮತ್ತು ವಿಳಾಸ

3) ಸಾಕ್ಷಿದಾರರು :- ಹೆಸರು ಮತ್ತು ವಿಳಾಸ

(1)

(2)

ಅನುಬಂಧ -1

ಸಮಾಜ ಕಲ್ಯಾಣ ಇಲಾಖೆ

ತಡೆಪಟ್ಟಿ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನೋಂದಾಯಿತ ಧಾರ್ಮಿಕ ಸಂಸ್ಥೆಗಳು/ಸಂಘ-ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆ/ಟ್ರಸ್ಟ್‌ಗಳ ಹೆಸರು ಮತ್ತು ವಿಳಾಸ :

ಕ್ರ. ಸಂ.	ವಿವರಗಳು	ಲಗತ್ತಿಸಲಾಗಿದೆಯೇ ?	ಪುಟ ಸಂಖ್ಯೆ
1.	ನಿಗದಿತ ನಮೂನೆ (ಅನುಬಂಧ-2)ಯಲ್ಲಿ ಅರ್ಜಿ ಸಲ್ಲಿಸಲಾಗಿದೆಯೇ.		
2.	ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ (3 ವರ್ಷಗಳು ಆಗಿರಬೇಕು)		
3.	ಸಂಸ್ಥೆಯ ಬೈಲಾ ಪ್ರತಿ		
4.	ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು ಸದಸ್ಯರುಗಳ ಪಟ್ಟಿ		
5.	ಅನುದಾನ ಪಡೆಯುವ ಬಗ್ಗೆ ಸಂಸ್ಥೆಯ ನಡವಳಿ ಪತ್ರ ಸಹಿತ ಕಳೆದ ಎರಡು ವರ್ಷಗಳ ಆಡಿಟ್ ವರದಿ		
6	ಸಂಸ್ಥೆಯು ಹೊಂದಿರುವ ಜಮೀನು/ನಿವೇಶನಕ್ಕೆ ಸಂಬಂಧಿಸಿದಂತೆ ಋಣ ಭಾರ ಪತ್ರ		
7.	ಸಂಸ್ಥೆಯು ಹೊಂದಿರುವ ಜಮೀನು/ ನಿವೇಶನಕ್ಕೆ ಸಂಬಂಧಿಸಿದಂತೆ ಖಾತಾ ಪತ್ರ ಅ) ಕಂದಾಯ ಪಾವತಿ ರಸೀತಿ ಆ) ಋಣ ಭಾರ ಪತ್ರ		
8.	ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ಪರವಾನಿಗೆ ಪಡೆಯಲಾಗಿದೆಯೇ (ಪತ್ರ ಲಗತ್ತಿಸುವುದು)		
9.	ಕಟ್ಟಡದ ಅಂದಾಜು ವೆಚ್ಚ ಮತ್ತು ನಕ್ಷೆ ಪಟ್ಟಿಗೆ ಸಂಬಂಧಿಸಿದಂತೆ ಅಧಿಕೃತ ಅಭಿಯಂತರರಿಂದ ಅನುಮೋದನೆ ಪಡೆದಿರುವ ಬಗ್ಗೆ ಹಾಗೂ ಸರ್ಕಾರದಿಂದ ಕೋರಲಾದ ಮೊತ್ತ		
10.	ಸರ್ಕಾರದ ಅನುದಾನವನ್ನು ಹೊರತುಪಡಿಸಿ ಬಾಕಿ ಮೊತ್ತವನ್ನು ಸಂಸ್ಥೆಯು ಭರಿಸಲು ಒಪ್ಪಿಗೆ ಇದೆಯೇ" ಇದ್ದರೆ ಆದಾಯ ಮೂಲಗಳ ವಿವರ		

11.	ಸರ್ಕಾರದ ಅನುದಾನದಿಂದ ನಿರ್ಮಿಸಿದ ಸಮುದಾಯ ಭವನಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಾಂಗದವರಿಗೆ ರಿಯಾಯಿತಿ ದರದಲ್ಲಿ ನೀಡುವ ಹಾಗೂ ರಾಜಕೀಯ ಉದ್ದೇಶಗಳಿಗಾಗಿ ಬಳಸದೇ ಇರುವ ಬಗ್ಗೆ ಮುಚ್ಚಳಿಕೆ ಪತ್ರ		
12.	ಸರ್ಕಾರದಿಂದ ಪಡೆಯುವ ಅನುದಾನವನ್ನು ಉದ್ದೇಶಿತ ಕಾರ್ಯಕ್ಕೆ ಮಾತ್ರ ಉಪಯೋಗ ಮಾಡುವ ಬಗ್ಗೆ ಮುಚ್ಚಳಿಕೆ ಪತ್ರ		
13.	ಸಂಸ್ಥೆಯು ಆರ್ಥಿಕ ನೆರವು ಪಡೆದ ಉದ್ದೇಶಗಳಿಗೆ ಮಾತ್ರ ಬಳಸುವುದಾಗಿ ಮುಚ್ಚಳಿಕೆ ಪತ್ರ		
14.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ ಸ್ಥಳ ತನಿಖಾ ವರದಿ		

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: 2015-16ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಸ್ಮಶಾನ ಭೂಮಿ ಇಲ್ಲದ ಕಡೆ ಹಂತ ಹಂತವಾಗಿ ಭೂಮಿಯನ್ನು ಖರೀದಿಸಿ ಕಾಯ್ದಿರಿಸುವ ಕುರಿತು.

<u>ಪ್ರಸ್ತಾವನೆ:</u>

2015-16ನೇ ಸಾಲಿನ ಆಯವ್ಯಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸ್ಮಶಾನ ಭೂಮಿ ಇಲ್ಲದ ಕಡೆಗಳಲ್ಲಿ ಹಂತ ಹಂತವಾಗಿ ಭೂಮಿಯನ್ನು ಖರೀದಿಸಿ ಸ್ಮಶಾನಕ್ಕಾಗಿ ಕಾಯ್ದಿರಿಸಲು ಘೋಷಿಸಲಾಗಿದೆ. ಸದರಿ ವಿಷಯವನ್ನು 26-05-2015ರಂದು ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನಲ್ಲಿ ಸಹ ಅನುಮೋದಿಸಿ, ರೂ.40.00 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ಈ ಅನುದಾನವನ್ನು ಜನಸಂಖ್ಯೆಯ ಆಧಾರದ ಮೇಲೆ 30 ಜಿಲ್ಲೆಗಳಿಗೆ ನೀಡಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ, ಈ ಕೆಳಕಂಡಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 322 ಪವಯೋ 2015,</u>
<u>ಬೆಂಗಳೂರು, ದಿನಾಂಕ:19-10-2015</u>

1) ಸ್ಮಶಾನ ಜಾಗ ಇಲ್ಲದ ಕಡೆ, <u>ಸರ್ಕಾರಿ ಜಮೀನನ್ನು</u> ಗುರುತಿಸಿ, ಆ ಊರಿನ ಎಸ್.ಸಿ/ಎಸ್.ಟಿ ಜನಸಂಖ್ಯೆ ಆಧಾರದ ಮೇಲೆ ಬೇಕಾಗುವ ಜಮೀನನ್ನು ನಿಗಧಿಪಡಿಸುವುದು. ಸರ್ಕಾರಿ ಜಮೀನು ಲಭ್ಯವಿಲ್ಲದೇ ಇದ್ದಲ್ಲಿ, ಖಾಸಗಿ ಜಮೀನನ್ನು <u>ಭೂಸ್ವಾಧೀನ ಕಾಯಿದೆ ಅಡಿಯಲ್ಲಿ ಅಥವಾ ಖಾಸಗಿಯವರಿಂದ ಖರೀದಿಸುವುದು.</u> ಜಿಲ್ಲಾಧಿಕಾರಿಗಳು ಖಾಸಗಿ ಜಮೀನನ್ನು ಸಂಬಂಧಿಸಿದ ಪ್ರಾದೇಶಿಕ ಆಯುಕ್ತರಿಂದ ಅನುಮೋದನೆ ಪಡೆದು ಜಮೀನನ್ನು ಖರೀದಿಸುವುದು. ಖರೀದಿಸುವಾಗ ಪ್ರಚಲಿತ ಮಾರ್ಗಸೂಚಿ ಬೆಲೆಯನ್ನು ಗಮನದಲ್ಲಿಟ್ಟುಕೊಂಡು ಜನಸಂಖ್ಯೆ ಆಧಾರದ ಮೇಲೆ ಒಂದು ಅಥವಾ ಎರಡು ಎಕರೆ ಜಮೀನನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ವತಿಯಿಂದ ವಸತಿ ಸೌಕರ್ಯಕ್ಕಾಗಿ ಖಾಸಗಿ ಜಮೀನು ಖರೀದಿಸಲು ನಿರ್ಣಯಿಸಿದ ಬೆಲೆಯಂತೆ ದರಗಳನ್ನು ನೀಡಿ ಖರೀದಿಸುವುದು.

2) ಸ್ಮಶಾನಕ್ಕಾಗಿ <u>ಸರ್ಕಾರಿ ಜಮೀನು</u> ಅಥವಾ ಖಾಸಗಿಯವರಿಂದ ಖರೀದಿಸಿದ ಜಮೀನುಗಳಲ್ಲಿ ಈ ಕೆಳಕಂಡ ಸವಲತ್ತುಗಳನ್ನು ಒದಗಿಸುವುದು:-

1) ನೀರಿನ ವ್ಯವಸ್ಥೆಗಾಗಿ ಕೊಳವೆ ಬಾವಿ ಅಥವಾ ಪೈಪುಗಳ ಮೂಲಕ ನೀರನ್ನು ಒದಗಿಸುವ ವ್ಯವಸ್ಥೆ;
2) ಸ್ಮಶಾನದಲ್ಲಿ ಅಂತ್ಯ ಕ್ರಿಯೆ ಇತ್ಯಾದಿಗಳನ್ನು ನಡೆಸಲು ಅನುಕೂಲವಾಗುವಂತೆ ಒಂದು ಮಂಟಪ ನಿರ್ಮಾಣ;

...2

3) ಸ್ಮಶಾನ ಜಮೀನಿನ ರಕ್ಷಣೆಗಾಗಿ ಸುತ್ತಲೂ ತಂತಿ ಬೇಲಿ ಅಥವಾ ಕಾಂಪೌಂಡು ಗೋಡೆ ನಿರ್ಮಾಣ.
4) ಸ್ಮಶಾನದ ಅಂಚಿನಲ್ಲಿ ಮರಗಿಡಗಳನ್ನು ಬೆಳೆಸುವುದು.
5) ಸ್ಮಶಾನದ ಜಮೀನೆಂದು ನಾಮಫಲಕ ಹಾಕುವುದು.

3) ಮೇಲ್ಕಂಡ ಯೋಜನೆಗೆ ಬೇಕಾಗುವ ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡಿ ಅನುಬಂಧ-1ರಲ್ಲಿ ನೀಡಲಾಗಿದೆ.

4) ಅನುಬಂಧ-1ರಂತೆ ಸದರಿ ಅನುದಾನವನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವುದು ಮತ್ತು ಕಾರ್ಯಕ್ರಮದ ಅನುಷ್ಠಾನಗೊಳಿಸುವ ಬಗ್ಗೆ ಕ್ರಮ ಜರುಗಿಸುವುದು.

5) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

1. ಜಿಲ್ಲಾಧಿಕಾರಿಗಳು : ಅಧ್ಯಕ್ಷರು
2. ಸಿ.ಇ.ಒ., ಜಿಲ್ಲಾ ಪಂಚಾಯತ್ : ಸದಸ್ಯರು
3. ಜಿಲ್ಲಾ ಆರೋಗ್ಯಾಧಿಕಾರಿಗಳು : ಸದಸ್ಯರು
4. ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು : ಸದಸ್ಯರು
5. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ : ಸದಸ್ಯ ಕಾರ್ಯದರ್ಶಿ
6. ಜಿಲ್ಲಾ ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿಗಳು/ ಯೋಜನಾ ಸಮನ್ವಯಾಧಿಕಾರಿಗಳು/ಐ.ಟಿ.ಡಿ.ಪಿ. : ಸದಸ್ಯ ಕಾರ್ಯದರ್ಶಿ

6) ಸಮಿತಿಯ ಕಾರ್ಯವ್ಯಾಪ್ತಿ-

1) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ಸ್ಮಶಾನ ಭೂಮಿ ಇಲ್ಲದ ಗ್ರಾಮಗಳನ್ನು ಗುರುತಿಸಿ ಅಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಆಧಾರದ ಮೇಲೆ ಬೇಕಾಗುವ ಜಮೀನನ್ನು ಕಾಯ್ದಿರಿಸುವುದು.

2) ಸರ್ಕಾರಿ ಜಮೀನು ಇಲ್ಲದಿದ್ದಲ್ಲಿ ಮೇಲ್ಕಂಡಂತೆ ಖಾಸಗಿಯವರಿಂದ ನಿಯಮಾನುಸಾರ ಖರೀದಿಸುವುದು. ಅವಶ್ಯಕ ಸವಲತ್ತುಗಳನ್ನು ಒದಗಿಸುವುದು.

3) ಈ ಕಾರ್ಯಕ್ರಮವನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸುವುದು.

7) ಕಂದಾಯ ಇಲಾಖೆ ವತಿಯಿಂದ ಸ್ಮಶಾನ ಉದ್ದೇಶಕ್ಕಾಗಿ ಎರಡು ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸುವ ಬಗ್ಗೆ ಈಗಾಗಲೇ ಸುತ್ತೋಲೆ ಸಂಖ್ಯೆ: ಆರ್‌ಡಿ 149 ಎಲ್‌ಜಿಪಿ 2014, ದಿನಾಂಕ: 11-09-2014ರಲ್ಲಿ ನೀಡಲಾಗಿದೆ. ಸದರಿ ಸುತ್ತೋಲೆಯಂತೆ ಈ ಕಾರ್ಯಕ್ರಮದಲ್ಲಿ ಸಹ ಕ್ರಮ ಜರುಗಿಸುವುದು.

8) ಖಾಸಗಿ ಜಮೀನಿನ ಮಾಲೀಕರಿಂದ ಖರೀದಿಸುವ ಜಮೀನನ್ನು ಸ್ವಾಧೀನ ಪಡೆದುಕೊಂಡು ಸಮಾಜ ಕಲ್ಯಾಣ ಇಲಾಖೆಯ ಹೆಸರಲ್ಲಿ ನೋಂದಣಿ ಮಾಡಿ ಭೂ ದಾಖಲೆಗಳಲ್ಲಿ ನಮೂದಿಸುವುದು.

9) ಈ ಯೋಜನೆಗೆ ತಗಲುವ ವೆಚ್ಚವನ್ನು ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ: 4225-01-800-0-07 ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ: 4225-02-800-0-07 ರಲ್ಲಿ ಭರಿಸುವುದು.

10) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 783 ವೆಚ್ಚ-3/2015, ದಿನಾಂಕ:04-09-2015 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 109 ಪಿಎಂಎಂ 2015, ದಿನಾಂಕ:05-10-2015ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್. ವನಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2,(ಪ್ರ)
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ ಪ್ರತಿ:-

1. ಮಹಾಲೇಖಪಾಲರು, (ಎ & ಇ,ಲೆಕ್ಕಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು.
ವರ್ಗಗಳ
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ ಯೋಜನಾ ಸಮನ್ವಯಾಧಿಕಾರಿಗಳು/ ಸಮಗ್ರ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಯೋಜನೆ
8. ಎಲ್ಲಾ ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

} ನಿರ್ದೇಶಕರು, ಪರಿಶಿಷ್ಟ ಕಲ್ಯಾಣ ಇಲಾಖೆಯ ಮುಖಾಂತ

<u>ಪ್ರತಿ ಇವರಿಗೆ ಮಾಹಿತಿಗಾಗಿ:</u>

- ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ.
3. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ

****

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಸ್ಮಶಾನ ಭೂಮಿ ಅಭಿವೃದ್ಧಿಪಡಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ 322 ಪವಯೋ 2015 ದಿನಾಂಕ:19.10.2015.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ಸಕನಿ:ಸ್ಮಭೂ:ಸಿಆರ್-04:2018-19, ದಿನಾಂಕ:01.10.2018 ಮತ್ತು 16.10.2018.

****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ-(1)ರ ಆದೇಶದಲ್ಲಿ 2015-16ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 190 ರನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸ್ಮಶಾನ ಭೂಮಿ ಇಲ್ಲದ ಸ್ಥಳಗಳಲ್ಲಿ ಸ್ಮಶಾನ ಭೂಮಿಗಾಗಿ ಸರ್ಕಾರಿ ಜಮೀನು ಪಡೆಯುವ/ಖಾಸಗಿ ಜಮೀನು ಖರೀದಿಸುವ ಬಗ್ಗೆ, ಸ್ಮಶಾನ ಭೂಮಿಗೆ ಒದಗಿಸಬೇಕಾದ ಸೌಲಭ್ಯಗಳು ಜಿಲ್ಲಾವಾರು ಅನುದಾನದ ಹಂಚಿಕೆ, ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಸಮಿತಿಯ ರಚನೆ, ಸಮಿತಿಯ ಕರ್ತವ್ಯಗಳು ಮೊದಲಾದವುಗಳನ್ನು ಒಳಗೊಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಸ್ಮಶಾನ ಭೂಮಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಸ್ವೀಕೃತವಾಗುತ್ತಿರುವ ಪ್ರಸ್ತಾವನೆಗಳಲ್ಲಿ, ಸ್ಮಶಾನ ಭೂಮಿ ಇಲ್ಲದ ಸ್ಥಳಗಳಲ್ಲಿ ಹೊಸದಾಗಿ ಜಮೀನು ಖರೀದಿಸುವ ಪ್ರಸ್ತಾವನೆಗಳಿಗಿಂತ, ಹಾಲಿ ಇರುವ ಸ್ಮಶಾನ ಭೂಮಿಯಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಅನುದಾನ ಬಿಡುಗಡೆ ಕೋರಿ ಹೆಚ್ಚಿನ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದರಿಂದ, ಹೊಸದಾಗಿ ಜಮೀನು ಖರೀದಿ ಮಾಡಿ ಮೂಲಭೂತ ಸೌಲಭ್ಯ ಒದಗಿಸುವ ಜೊತೆಗೆ ಹಾಲಿ ಇರುವ ಸ್ಮಶಾನ ಭೂಮಿಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಪರಿಷ್ಕೃತ ಮಾರ್ಗಸೂಚಿ ಹೊರಡಿಸುವಂತೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರಗಳಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಕೋರಿರುವಂತೆ ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಹೊಸದಾಗಿ ಜಮೀನು ಖರೀದಿಸಿ ಮೂಲಭೂತ ಸೌಲಭ್ಯ ಒದಗಿಸುವ ಜೊತೆಗೆ ಅಸ್ತಿತ್ವದಲ್ಲಿರುವ/ಹಾಲಿ ಇರುವ ಸ್ಮಶಾನ ಭೂಮಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಅನುದಾನ ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶ

ಸರ್ಕಾರಿ ಆದೇಶ ಸಂಖ್ಯೆ:ಸಕಇ 10 ಪವಯೋ 2019 ಬೆಂಗಳೂರು, ದಿನಾಂಕ: 18.06.2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಸ್ಮಶಾನ ಭೂಮಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಹೊಸದಾಗಿ ಜಮೀನು ಖರೀದಿಸಿ ಮೂಲಭೂತ ಸೌಲಭ್ಯ ಒದಗಿಸುವ ಜೊತೆಗೆ ಅಸ್ತಿತ್ವದಲ್ಲಿರುವ/ಹಾಲಿ ಇರುವ ಸ್ಮಶಾನ ಭೂಮಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಸಲುವಾಗಿ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ.

--2

ಸರ್ಕಾರದ ಆದೇಶ ಸಂಖ್ಯೆ: ಸಕಇ 322 ಪವಯೋ 2015 ದಿನಾಂಕ:19.10.2015 ಮತ್ತು ಸುತ್ತೋಲೆ ದಿನಾಂಕ:28.02.2017ರಲ್ಲಿನ ಮಾರ್ಗಸೂಚಿಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುವುದು ಹಾಗೂ ಆದೇಶದ ಕ್ರಮ ಸಂಖ್ಯೆ 2 ರಲ್ಲಿನ ಸೌಲಭ್ಯಗಳೊಂದಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿ/ಗ್ರಾಮಗಳಿಂದ ಸ್ಮಶಾನ ಭೂಮಿಗೆ ಹೋಗುವ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 04 ಟಿಎಫ್‌ಪಿ 2018, ದಿನಾಂಕ:08.01.2019ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜಶ್ರೀ ಹೆಚ್.ಕುಲಕರ್ಣಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕಪರಿಶೋಧನೆ-2)ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಸಂಬಂದಿಸಿದ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
7. ಸಂಬಂಧಿಸಿದ ಯೋಜನಾ ಸಮನ್ವಯಾಧಿಕಾರಿ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಉಪ ಕಾರ್ಯದರ್ಶಿ-1&2, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು.

ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ:- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯಲು ಸರ್ಕಾರದಿಂದ ಸಮಾನಾಂತರ ಖಾತರಿ ಒದಗಿಸುವ ಬಗ್ಗೆ.

ಓದಲಾಗಿದೆ:- 2017-18ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-182 ರಂತೆ

*****

ಪ್ರಸ್ತಾವನೆ:

8. ಕರ್ನಾಟಕ ರಾಜ್ಯದಲ್ಲಿ ಖಾಯಂ ವಾಸಿಯಾಗಿದ್ದ ವಿದ್ಯಾರ್ಥಿಗಳು ಹೊರ ರಾಜ್ಯದಲ್ಲಿ ಶಾಸನಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ ಸರ್ಕಾರಿ / ಸ್ಥಳೀಯ ಸಂಸ್ಥೆ / ಖಾಸಗಿ ಅನುದಾನಿತ /ಮಾನ್ಯತೆ ಪಡೆದ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಅರ್ಹರಿರುತ್ತಾರೆ. ಆದರೆ ಅಂತಹವರಿಗೆ ಕರ್ನಾಟಕ ರಾಜ್ಯದಲ್ಲಿ ಆಯಾ ಕೋರ್ಸುಗಳಲ್ಲಿ ನಿಗದಿಪಡಿಸಿದ ಶುಲ್ಕ ಅಥವಾ ವಾಸ್ತವವಾಗಿ ಪಾವತಿಸಿದ ಶುಲ್ಕ ಅದರಲ್ಲಿ ಯಾವುದು ಕಡಿಮೆಯೋ ಅದನ್ನು ಮಾತ್ರ ಮಂಜೂರಾತಿ / ಮರುಪಾವತಿಸಲಾಗುವುದು. (ಈ ಶುಲ್ಕ ಮರುಪಾವತಿ ಪಡೆಯಲು ವಾರ್ಷಿಕ ಆದಾಯ ರೂ.2.50 ಲಕ್ಷಗಳ ಒಳಗೆ ಇರುವವರು ಮಾತ್ರ ಅರ್ಹರು)
9. ಕುಟುಂಬ ವಾರ್ಷಿಕ ವರಮಾನ/ಆದಾಯ:

   ಎ) ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.2.50 ಲಕ್ಷಗಳ ಮಿತಿಯೊಳಗಿರತಕ್ಕದ್ದು. ಅಂತಹ ವಿದ್ಯಾರ್ಥಿಗಳು ಪೂರ್ಣ (ಶೇ:100 ರಷ್ಟು) ಶುಲ್ಕ ಮಂಜೂರಾತಿಗೆ ಅರ್ಹರಿರುತ್ತಾರೆ.

   ಬಿ) ಆದರೆ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ರೂ.2.50 ಲಕ್ಷಗಳಿಂದ ರೂ.10.00 ಲಕ್ಷಗಳ ಮಿತಿಯೊಳಗಿದ್ದಲ್ಲಿ, ಇಂತಹ ವಿದ್ಯಾರ್ಥಿಗಳು ನಿಗದಿಪಡಿಸಿದ ಒಟ್ಟು ಶುಲ್ಕದಲ್ಲಿ ಶೇ:50 ರಷ್ಟು ಮರುಪಾವತಿಗೆ ಅರ್ಹರಿರುತ್ತಾರೆ.

II. ಮಂಜೂರಾತಿ/ಮರು ಪಾವತಿಸಬೇಕಾದ ಶುಲ್ಕಗಳು

ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷದೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು	ಕುಟುಂಬ ವಾರ್ಷಿಕ ವರಮಾನ ರೂ.2.50 ಗಳಿಂದ ರೂ.10.00 ಲಕ್ಷಗಳ ಮಿತಿಯೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು
1.ಪರೀಕ್ಷಾ ಶುಲ್ಕ	1.ಪರೀಕ್ಷಾ ಶುಲ್ಕ
2. ಪ್ರವೇಶ/ನೋಂದಣಿ ಶುಲ್ಕ	2. ಪ್ರವೇಶ/ನೋಂದಣಿ ಶುಲ್ಕ
3.ಬೋಧನಾ ಶುಲ್ಕ	3. ಬೋಧನಾ ಶುಲ್ಕ
4.ಪ್ರಯೋಗಾಲಯ ಶುಲ್ಕ (ವಿಜ್ಞಾನ/ ವೈದ್ಯಕೀಯ/ ತಾಂತ್ರಿಕ ಕೋರ್ಸುಗಳಿಗೆ)	4. ಇತರೆ ಕಡ್ಡಾಯ ಶುಲ್ಕಗಳು ಗರಿಷ್ಠ ರೂ.500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೋ ಅದು.
5. ಕ್ರೀಡಾ ಶುಲ್ಕ	-
6. ಗ್ರಂಥಾಲಯ ಶುಲ್ಕ	-
7. ವೈದ್ಯಕೀಯ ಪರೀಕ್ಷಾ ಶುಲ್ಕ	-
8. ಇತರೆ ಕಡ್ಡಾಯ ಶುಲ್ಕಗಳು ಗರಿಷ್ಠ ರೂ.500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೋ ಅದು:	-

---3)

III. ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷದೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಂಜೂರಾತಿ/ ಮರುಪಾವತಿ ಪ್ರಾಧಿಕಾರಿ ಮತ್ತು ಇತರೆ ವಿವರಗಳು

1. ಶುಲ್ಕ ಮಂಜೂರಾತಿ/ಮರುಪಾವತಿ ಪ್ರಾಧಿಕಾರ :- ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಸಹಾಯಕ ನಿರ್ದೇಶಕರು ಗ್ರೇಡ್-1/ಗ್ರೇಡ್-2 (TSWO)/ಪರಿಶಿಷ್ಟ ವರ್ಗದ ತಾಲ್ಲೂಕು ಮಟ್ಟದ ಅಧಿಕಾರಿ

ಕೋರ್ಸ್‌ಗಳ ವಿವರ	ಪ್ರವೇಶ ಪಡೆಯುವ ಶಿಕ್ಷಣ ಸಂಸ್ಥೆ/ಕಾಲೇಜು	ಶುಲ್ಕ ಮಂಜೂರಾತಿ/ ಮರುಪಾವತಿ ಮಾಡಬೇಕಾದ ದರಗಳು
1) ಪಿ:ಯು.ಸಿ	ಎ) ಸರ್ಕಾರಿ/ಅನುದಾನಿತ ಕಾಲೇಜು/ ಸಂಸ್ಥೆಗಳು	ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗಧಿಪಡಿಸಿದ ಶುಲ್ಕ ಮಾತ್ರ
	ಬಿ) ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	
2)ಪದವಿ/ಸ್ನಾತಕೋತ್ತರ ಪದವಿ ಕೋರ್ಸ್‌ಗಳುಕಲಾ/ವಾಣಿಜ್ಯ/ ವಿಜ್ಞಾನ/ಕಾನೂನು ಮತ್ತು ಇನ್ನಿತರೆ ಪದವಿ ಮತ್ತು ಸ್ನಾತಕೋತ್ತರ ಸಾಮಾನ್ಯ ಕೋರ್ಸ್‌ಗಳು, ಎಂ.ಫಿಲ್, ಪಿಹೆಚ್‌ಡಿ	ಎ) ರಾಜ್ಯ/ ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಸರ್ಕಾರಿ/ಅನುದಾನಿತ ಕಾಲೇಜು/ಸಂಸ್ಥೆಗಳು	ಸರ್ಕಾರ/ಸಂಬಂಧಿಸಿದ ರಾಜ್ಯ/ಕೇಂದ್ರ ಸರ್ಕಾರಿ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಶುಲ್ಕ
	ಬಿ) ರಾಜ್ಯ/ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	
	ಸಿ) ಮಾನ್ಯತೆ ಪಡೆದ ಖಾಸಗಿ/ ಡಿಮ್ಡ್ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜು/ ಸಂಸ್ಥೆಗಳು	ಮೇಲ್ಕಂಡ (ಎ) ಮತ್ತು (ಬಿ)ಗೆ ನಿಗಧಿಪಡಿಸಿದ ದರಗಳು ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕಗಳಲ್ಲಿ ಯಾವುದು ಕಡಿಮೆಯೋ ಅದು
3)ವೃತ್ತಿಪರ- ಮೆಡಿಕಲ್ ಎಂ.ಬಿ.ಬಿ.ಎಸ್. ಎಂ.ಎಸ್. ಎಂಡಿ. ಬಿಡಿಎಸ್. ಎಂ.ಡಿ.ಎಸ್. ಪಿಜಿ ಡಿಪ್ಲೊಮಾ ಕೋರ್ಸ್‌ಗಳು/ ಸೂಪರ್. ಸ್ಪೆಷಾಲಿಟಿ. ಕೋರ್ಸ್	ಎ) ಸರ್ಕಾರಿ ಕಾಲೇಜು/ ಸಂಸ್ಥೆಗಳು	ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗದಿ ಪಡಿಸಿದ ಶುಲ್ಕ
	ಬಿ) ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ- ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗದಿಪಡಿಸಿದ ಶುಲ್ಕ. 2)ಕಾಮೆಡ್-ಕೆ/ಕೆ.ಆರ್.ಎಲ್.ಎಂ.ಪಿ.ಸಿ.ಎ/ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ – ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಆ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ.

--4)

	ಸಿ) ಮಾನ್ಯತೆ ಪಡೆದ ಖಾಸಗಿ/ ಡಿಮ್ಡ್ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜು/ ಸಂಸ್ಥೆಗಳು	3)ಕಾಮೆಡ್-ಕೆ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯ ನಿಗಧಿಪಡಿಸಿದ ಶುಲ್ಕ ಇವರುಗಳಲ್ಲಿ ಯಾವುದು ಕಡಿಮೆಯೊ ಅದು. (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)
4)ಇಂಡಿಯನ್ ಮೆಡಿಸನ್- ಬಿ.ಎ.ಎಂ.ಎಸ್/ಬಿ.ಹೆಚ್.ಎಂ.ಎಸ್/ಬಿ.ಯು.ಎಂ.ಎಸ್/ಬಿಎನ್‌ವೈಎಸ್ ಮತ್ತು ಸ್ನಾತಕೋತ್ತರ ಕೋರ್ಸುಗಳು	ಎ) ಸರ್ಕಾರಿ ಕಾಲೇಜು/ ಸಂಸ್ಥೆಗಳು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸರ್ಕಾರ ನಿಗದಿ ಪಡಿಸಿದ ಶುಲ್ಕ
	ಬಿ) ಅನುದಾನಿತ ಕಾಲೇಜು/ ಸಂಸ್ಥೆಗಳು (80 ಸರ್ಕಾರಿ : 20 ಆಡಳಿತ ಮಂಡಳಿ)	1)ಪ್ರತಿಶತ 80% ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು/ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2) ಪ್ರತಿಶತ 20% ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ
	ಸಿ) ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ ಸಂಸ್ಥೆಗಳು (20 ಸರ್ಕಾರಿ : 80 ಆಡಳಿತ ಮಂಡಳಿ)	1)ಪ್ರತಿಶತ 20% ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು /ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2) ಪ್ರತಿಶತ 80% ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)
5)ಬಿ.ಇ./ಬಿ.ಟೆಕ್, ಬಿಆರ್ಕ್, ಎಂ.ಇ/ ಎಂ.ಟೆಕ್/ಎಂ.ಎಸ್	ಎ)ಸರ್ಕಾರಿ/ಸರ್ಕಾರಿ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು	ಎ) ಸರ್ಕಾರ/ಸರ್ಕಾರಿ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಶುಲ್ಕ
	ಬಿ) ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ- ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗದಿಪಡಿಸಿದ ಶುಲ್ಕ. 2)ಕಾಮೆಡ್-ಕೆ/ ಕೆ.ಆರ್‌ಎಲ್‌ಎಂ.ಪಿ.ಸಿ.ಎ/ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ – ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಆ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ.

	ಸಿ) ಮಾನ್ಯತೆ ಪಡೆದ ಖಾಸಗಿ/ ಡಿಮ್ಡ್ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜು/ ಸಂಸ್ಥೆಗಳು	3)ಕಾಮೆಡ್-ಕೆ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಡಿಮ್ಡ್ ವಿಶ್ವವಿದ್ಯಾಲಯ ನಿಗಧಿಪಡಿಸಿದ ಶುಲ್ಕ ಇವರುಗಳಲ್ಲಿ ಯಾವುದು ಕಡಿಮೆಯೊ ಅದು. (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)
6)ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು:- ಅಗ್ರಿಕಲ್ಚರ್, ಹಾರ್ಟಿಕಲ್ಚರ್ ವೆಟರ್ನರಿ, ಫಾರೆಸ್ಟ್, ಮೀನುಗಾರಿಕೆ, ರೇಷ್ಮೆ	ಎ) ಸರ್ಕಾರಿ/ಸರ್ಕಾರದ ವಿಶ್ವವಿದ್ಯಾಲಯ-ಗಳು ನಡೆಸುತ್ತಿರುವ ಕಾಲೇಜು/ ಸಂಸ್ಥೆಗಳು	ಎ) ಸರ್ಕಾರ/ಸಂಬಂಧಿಸಿದ ಸರ್ಕಾರಿ ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ಶುಲ್ಕ
	ಬಿ) ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜು/ಸಂಸ್ಥೆಗಳು	ಸರ್ಕಾರಿ ಸೀಟುಗಳಿಗೆ ಸರ್ಕಾರ/ ಸಂಬಂಧಿಸಿದ ಸರ್ಕಾರಿ ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ಶುಲ್ಕ
	ಸಿ) ಮಾನ್ಯತೆ ಪಡೆದ ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/	ಸರ್ಕಾರಿ ಸೀಟುಗಳಿಗೆ ಸರ್ಕಾರ/ ಸಂಬಂಧಿಸಿದ ಸರ್ಕಾರಿ ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದು
7)ಬಿ.ಎಸ್.ಸಿ (ನರ್ಸಿಂಗ್)/ ಎಂ.ಎಸ್‌ಸಿ(ನರ್ಸಿಂಗ್), ಬಿ.ಫಾರ್ಮ, ಎಂ.ಫಾರ್ಮ, ಬಿ.ಪಿ.ಟಿ ಮತ್ತು ಎಂ.ಪಿ.ಟಿ	ಎ)ಸರ್ಕಾರಿ/ಸರ್ಕಾರದ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜು/ ಸಂಸ್ಥೆಗಳು	ಎ) ಸರ್ಕಾರ/ಸರ್ಕಾರದ ವಿಶ್ವವಿದ್ಯಾಲಯಗಳು ನಿಗದಿ ಪಡಿಸಿದ ಶುಲ್ಕ
	ಬಿ) ಮಾನ್ಯತೆ ಪಡೆದ ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು/ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2)ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ
	ಸಿ) ಮಾನ್ಯತೆ ಪಡೆದ ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/	ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದು (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)

---6)

8)ಬಿ.ಇಡಿ. ಎಂ.ಇಡಿ. ಬಿ.ಪಿ.ಎಡ್. ಎಂ.ಪಿ.ಎಡ್. ಡಿ.ಇಡಿ. ಡಿಪಿಇಡಿ	ಎ) ಸರ್ಕಾರಿ/ಸರ್ಕಾರಿ ವಿಶ್ವವಿದ್ಯಾಲಯ ನಡೆಸುತ್ತಿರುವ ಕಾಲೇಜುಗಳು	ಸರ್ಕಾರ/ಸಂಬಂಧಿಸಿದ ಸರ್ಕಾರಿ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ
	ಬಿ) ಮಾನ್ಯತೆ ಪಡೆದ ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು/ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2)ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ
	ಸಿ) ಮಾನ್ಯತೆ ಪಡೆದ ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/	ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದು (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)
9)ಬಿ.ಬಿ.ಎಂ. ಬಿ.ಸಿ.ಎ ಎಂ.ಬಿ.ಎ, ಎಂ.ಸಿ.ಎ, ಪಿ.ಜಿ.ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್	ಎ) ಸರ್ಕಾರಿ/ಸರ್ಕಾರಿ ವಿಶ್ವವಿದ್ಯಾಲಯ ನಡೆಸುತ್ತಿರುವ ಕಾಲೇಜುಗಳು	ಸರ್ಕಾರ/ ಸರ್ಕಾರಿ ವಿಶ್ವವಿದ್ಯಾಲಯಗಳು ನಿಗದಿ ಪಡಿಸಿದ ಶುಲ್ಕ
	ಬಿ) ಮಾನ್ಯತೆ ಪಡೆದ ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು/ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2)ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)
	ಸಿ) ಮಾನ್ಯತೆ ಪಡೆದ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳ ಕಾಲೇಜುಗಳು	ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದು (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)

---7)

10)ಡಿಪ್ಲೋಮಾ ಕೋರ್ಸ್‌ಗಳು:- ನರ್ಸಿಂಗ್, ಪ್ಯಾರಾ ಮೆಡಿಕಲ್, ಪಾಲಿಟೆಕ್ನಿಕ್, ಇತರೆ ಡಿಪ್ಲೋಮಾ ಕೋರ್ಸ್‌ಗಳು	ಎ) ಸರ್ಕಾರಿ ಕಾಲೇಜು	ಸಂಬಂಧಿಸಿದ ಇಲಾಖೆಗಳಿಂದ ಸರ್ಕಾರ ನಿಗದಿ ಪಡಿಸಿದ ಶುಲ್ಕ
	ಬಿ) ಮಾನ್ಯತೆ ಪಡೆದ ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು/ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2)ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ
	ಮಾನ್ಯತೆ ಪಡೆದ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯ/ಕಾಲೇಜುಗಳು	ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದು (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)
11)ಐ.ಟಿ.ಐ ಮತ್ತು ಜೆ.ಒ.ಸಿ (ಜಾಬ್ ಒರಿಯೆಂಟೆಡ್ ಕೋರ್ಸ್‌ಗಳು)	ಎ) ಸರ್ಕಾರಿ ಕಾಲೇಜು	ಎ) ಸಂಬಂಧಿಸಿದ ಇಲಾಖೆಗಳಿಂದ ಸರ್ಕಾರ ನಿಗದಿ ಪಡಿಸಿದ ಶುಲ್ಕ
	ಬಿ)ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಕಾಲೇಜು/ಸಂಸ್ಥೆಗಳು	1) ಸರ್ಕಾರಿ ಕೋಟಾ ವರೆಗಿನ ಸೀಟುಗಳಿಗೆ- (ಸರ್ಕಾರ ಮತ್ತು/ಅಥವಾ ಆಡಳಿತ ಮಂಡಳಿ ಮೂಲಕ ತುಂಬಿದ್ದರೂ ಸಹ)- ಸರ್ಕಾರಿ ಸೀಟುಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕ ಮಾತ್ರ 2)ಆಡಳಿತ ಮಂಡಳಿ ಸೀಟುಗಳಿಗೆ- ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮಾತ್ರ
	ಸಿ) ಮಾನ್ಯತೆ ಪಡೆದ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯ/ಕಾಲೇಜುಗಳು	ಸರ್ಕಾರ ಆಡಳಿತ ಮಂಡಳಿ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದು (ಡೊನೇಷನ್ ಸೀಟು ಪಡೆದವರು ಶುಲ್ಕ ಮಂಜೂರಾತಿ/ ಮರುಪಾವತಿಗೆ ಅರ್ಹರಲ್ಲ)

--8)

IV.ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷಗಳಿಂದ ರೂ.10.00 ಲಕ್ಷಗಳ ಮಿತಿಯೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮಂಜೂರಾತಿ/ಮರುಪಾವತಿ ಪ್ರಾಧಿಕಾರಿಗಳು ಮತ್ತು ದರಗಳು (ಶೇ.50 ರಷ್ಟು ನಿಗಧಿತ ಶುಲ್ಕದಲ್ಲಿ)

ಕ್ರ.ಸಂ	ಕೋರ್ಸುಗಳು ಮತ್ತು ಮಂಜೂರಾತಿ ಪ್ರಾಧಿಕಾರ	ಪ್ರವೇಶ ಪಡೆಯುವ ಕಾಲೇಜು ಮತ್ತು ಸಂಸ್ಥೆ	ಶುಲ್ಕ ಮಂಜೂರಾತಿ/ ಮರುಪಾವತಿ ಮಾಡಬೇಕಾದ ದರಗಳು
1.	ವೃತ್ತಿಪರ- ಮೆಡಿಕಲ್ ಎಂ.ಬಿ.ಬಿ.ಎಸ್. ಎಂ.ಎಸ್. ಎಂಡಿ. ಬಿಡಿಎಸ್, ಎಂ.ಡಿ.ಎಸ್. ಪಿಜಿ ಡಿಪ್ಲೊಮಾ ಕೋರ್ಸ್‌ಗಳು/ ಸೂಪರ್ ಸ್ಪೆಷಾಲಿಟಿ ಕೋರ್ಸ್ <u>(ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ರವರು ಮಂಜೂರಾತಿ/ಮರು ಪಾವತಿ ಪ್ರಾಧಿಕಾರಿಗಳು)</u>	ಎ)ಸರ್ಕಾರಿ/ ಸರ್ಕಾರಿ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು	ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗದಿಪಡಿಸಿದ ಶುಲ್ಕ ಒಟ್ಟು ಮೊತ್ತ (ಶೇ:50 ರಷ್ಟು) **
		ಬಿ)ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು	1)ಸಿಇಟಿ/ಪಿಜಿಸಿಇಟಿ ಮುಖಾಂತರ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ- ಸರ್ಕಾರ ನಿಗದಿಪಡಿಸಿದ ಒಟ್ಟು ಶುಲ್ಕ (ಶೇ:50 ರಷ್ಟು) ** 2) ಕಾಮೆಡ್-ಕೆ/ ಕೆ.ಆರ್.ಎಲ್.ಎಂ.ಪಿ.ಸಿ.ಎ ಮೂಲಕ ಪ್ರವೇಶ ಪಡೆದವರಿಗೆ- ಸರ್ಕಾರ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಕಾಮೆಡ್-ಕೆ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮೊತ್ತದ ಶೇ50% ರಷ್ಟು.
		ಸಿ) ಮಾನ್ಯತೆ ಖಾಸಗಿ/ಡಿಮ್ಡ್ ಯನಿವರ್ಸಿಟಿ ಕಾಲೇಜುಗಳು	1) ಡೀಮ್ಡ್ ಯೂನಿವರ್ಸಿಟಿ ದಲ್ಲಿ ಸಿಇಟಿ/ಪಿಜಿಸಿಇಟಿ ಮುಖಾಂತರ ಅಥವಾ ಅವರೆ ನೇರವಾಗಿ ಆಯ್ಕೆಗೊಂಡಿದ್ದಲ್ಲಿ- ಸರ್ಕಾರ ಕಾಮೆಡ್-ಕೆ ಸೀಟಿಗೆ ನಿಗದಿಪಡಿಸಿದ ಶುಲ್ಕಧ ಶೇ50 ರಷ್ಟು ಮಾತ್ರ ನೀಡುವುದು
2.	ಬಿ.ಇ./ಬಿ.ಟೆಕ್, ಬಿಆರ್ಕ್, ಎಂ.ಇ/ ಎಂ.ಟೆಕ್/ಎಂ.ಎಸ್ <u>(ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರು ಮಂಜೂರಾತಿ/ಮರು ಪಾವತಿ ಪ್ರಾಧಿಕಾರಿಗಳು)</u>	ಎ)ಸರ್ಕಾರಿ/ ಸರ್ಕಾರಿ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು	ಎ) ತಾಂತ್ರಿಕ್ ಶಿಕ್ಷಣ ಇಲಾಖೆಯಿಂದ ಸರ್ಕಾರ ನಿಗಧಿಪಡಿಸಿದ ಶುಲ್ಕದ ಒಟ್ಟು ಮೊತ್ತದ ಶೇ50% ರಷ್ಟು.
		ಬಿ)ಅನುದಾನಿತ/ ಮಾನ್ಯತೆ ಪಡೆದ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು	1)ಸಿಇಟಿ/ಪಿಜಿಸಿಇಟಿ ಮುಖಾಂತರ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ ಶುಲ್ಕದ ಒಟ್ಟು ಮೊತ್ತದ ಶೇ50% ರಷ್ಟು. 2) ಕಾಮೆಡ್-ಕೆ/ ಕೆ.ಆರ್.ಎಲ್.ಎಂ.ಪಿ.ಸಿ.ಎ ಮೂಲಕ ಪ್ರವೇಶ ಪಡೆದವರಿಗೆ- ಸರ್ಕಾರ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಕಾಮೆಡ್-ಕೆ ಸೀಟುಗಳಿಗೆ ನಿಗದಿಪಡಿಸಿದ ಶುಲ್ಕ ಮೊತ್ತದ ಶೇ.50% ರಷ್ಟು.

---9)

		ಸಿ) ಮಾನ್ಯತೆ ಖಾಸಗಿ/ಡಿಮ್ಡ್ ಯನಿವರ್ಸಿಟಿ ಕಾಲೇಜುಗಳು	ಸಿಇಟಿ/ಪಿಜಿಸಿಇಟಿ ಮುಖಾಂತರ ಅಥವಾ ಅವರೆ ನೇರವಾಗಿ ಆಯ್ಕೆಗೊಂಡಿದ್ದಲ್ಲಿ- ಸರ್ಕಾರ ಕಾಮೆಡ್-ಕೆ ಸೀಟಿಗೆ ನಿಗದಿಪಡಿಸಿದ ಶುಲ್ಕದ ಶೇ.50% ರಷ್ಟು. ಮಾತ್ರ ನೀಡುವುದು (ಡೊನೇಷನ್ ಸೀಟು ಪಡೆದವರು ಶುಲ್ಕ ಮರುಪಾವತಿಗೆ ಅರ್ಹರಲ್ಲ)
3.	ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು:- ಅಗ್ರಿಕಲ್ಚರ್, ಹಾರ್ಟಿಕಲ್ಚರ್, ವೆಟರ್ನರಿ, ಫಾರೆಸ್ಟ್, ಮೀನುಗಾರಿಕೆ, ರೇಷ್ಮೆ (ಸಂಬಂಧಿಸಿದ ಇಲಾಖೆಗಳು/ವಿಶ್ವವಿದ್ಯಾಲಯಗಳು ಮಂಜೂರಾತಿ/ಮರು ಪಾವತಿ ಪ್ರಾಧಿಕಾರಿಗಳು) *****	ಎ) ಸರ್ಕಾರ/ ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು	ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು
		ಬಿ) ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜು/ಸಂಸ್ಥೆಗಳು	ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು
		ಸಿ) ಮಾನ್ಯತೆ ಪಡೆದ ಖಾಸಗಿ/ ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/	ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದ ಶೇ 50% ರಷ್ಟು: ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕಗಳಲ್ಲಿನ ಶೇ 50% ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅದು.
4.	ಇನ್ನಿತರೆ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಪದವಿ. ಡಿಪ್ಲೋಮಾ. ಪಿ.ಜಿ.ಡಿಪ್ಲೋಮಾ. ಪಿ.ಯು.ಸಿ ಇನ್ನಿತರೆ ಕೋರ್ಸ್‌ಗಳು (ಸಂಬಂಧಿಸಿದ ಇಲಾಖೆಗಳು/ ವಿಶ್ವವಿದ್ಯಾಲಯಗಳು ಮಂಜೂರಾತಿ/ಮರು ಪಾವತಿ ಪ್ರಾಧಿಕಾರಿಗಳು) *****	ಎ) ಸರ್ಕಾರ/ಸರ್ಕಾರದ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ಕಾಲೇಜುಗಳು	ಸರ್ಕಾರ/ಸಂಬಂಧಿಸಿದ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು.
		ಬಿ) ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜು/ಸಂಸ್ಥೆಗಳು	ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದಲ್ಲಿ ಶೇ 50 ರಷ್ಟು.
		ಸಿ) ಮಾನ್ಯತೆ ಪಡೆದ ಖಾಸಗಿ/ ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಅಧೀನದಲ್ಲಿನ ಕಾಲೇಜು/ಸಂಸ್ಥೆಗಳು/	ಸರ್ಕಾರ/ಸಂಬಂಧಿಸಿದ ಸರ್ಕಾರದ ವಿಶ್ವವಿದ್ಯಾಲಯಗಳು ಸರ್ಕಾರಿ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕದ ಶೇ 50% ರಷ್ಟು: ಅಥವಾ ಖಾಸಗಿ/ಡಿಮ್ಡ್ ವಿಶ್ವವಿದ್ಯಾಲಯಗಳು ನಿಗಧಿಪಡಿಸಿದ ಶುಲ್ಕಗಳಲ್ಲಿನ ಶೇ 50% ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅದು.

***** ಸಂಬಂಧಪಟ್ಟ ಇಲಾಖೆಗಳು ಎಸ್‌ಸಿ.ಎಸ್‌ಪಿ/ಟಿ.ಎಸ್.ಪಿ ಯೋಜನೆಯಡಿ ಆಯವ್ಯಯ ಸಮಯದಲ್ಲಿ ಅನುದಾನ ಒದಗಿಸಿಕೊಂಡು ಶುಲ್ಕ ಮರುಪಾವತಿ ಮಾಡುವುದು.

--10)

ಮಂಜೂರಾತಿ/ಮರುಪಾವತಿ ಪ್ರಾಧಿಕಾರಿಗಳು ಮಂಜೂರಾತಿ ನೀಡುವಾಗ ಸರ್ಕಾರಿ ಕೋಟಾ ಸೀಟುಗಳು ಎಷ್ಟಿವೆ ಎಂಬುದನ್ನು ಖಾತ್ರಿಪಡಿಸಿಕೊಂಡು ಮೇಲ್ಕಂಡಂತೆ ಮಂಜೂರಾತಿ ನೀಡುವುದು.

<u>ಶಿಕ್ಷಣ ಸಂಸ್ಥೆಗಳು ಪ್ರವೇಶದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮ</u>

1) ಎ) ಕುಟುಂಬದ ವಾರ್ಷಿಕ ಆದಾಯ <u>ರೂ.2.50</u> ಲಕ್ಷರೊಳಗಿನ ಪ್ರಕರಣಗಳಲ್ಲಿ – ಪ.ಜಾತಿ ಮತ್ತು ಪ.ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮುಖಾಂತರ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದಲ್ಲಿ ಅಂತಹವರಿಂದ ಶುಲ್ಕವನ್ನು ಪಡೆಯದೆ ಪ್ರವೇಶಾತಿಯನ್ನು ನೀಡುವುದು. ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ನಂತರ ಆ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರು ಪಾವತಿಸಲಾಗುವುದು.

ಬಿ) ಆದರೆ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದೇ ಇದ್ದಲ್ಲಿ ಅಂತಹವರಿಂದ ಶುಲ್ಕವನ್ನು ಪಡೆದು ಪ್ರವೇಶಾತಿಯನ್ನು ನೀಡುವುದು. ನಂತರ ಅಂತಹ ಪ್ರಕರಣಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹರಿಗೆ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರು ಪಾವತಿಸಲಾಗುವುದು.

ಸಿ) ಇದೇ ರೀತಿಯಲ್ಲಿ ಇತರ ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯದೆ ಪ್ರವೇಶ ನೀಡತಕ್ಕದ್ದು. ಮತ್ತು ಮರು ಪಾವತಿಗೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವುದು.

ಡಿ) ಆದಾಯ ಪ್ರಮಾಣ ಪತ್ರ ಕೋರ್ಸ್ ಅವಧಿಗೆ ಮಾನ್ಯತೆ ಹೊಂದಿರುತ್ತದೆ. (ಕೋರ್ಸ್ ಅವಧಿಯಲ್ಲಿ ಪ್ರತಿ ವರ್ಷವು ಆದಾಯ ಪ್ರಮಾಣ ಪತ್ರ ನವೀಕರಿಸಬೇಕಾಗಿರುವುದಿಲ್ಲ.) ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿರುವ ನೌಕರರು/ಅಧಿಕಾರಿಗಳು ಕಡ್ಡಾಯವಾಗಿ ವೇತನ ಪ್ರಮಾಣ ಪತ್ರ/ ಆದಾಯ ತೆರಿಗೆ ಪಾವತಿ ರಿಟರ್ನ್ಸ್‌ನ್ನು ಸಲ್ಲಿಸತಕ್ಕದ್ದು. (ಹಾಗಿದ್ದಲ್ಲಿ ತಹಶೀಲ್ದಾರ್‌ರವರಿಂದ ಆದಾಯ ಪ್ರಮಾಣ ಪತ್ರ ಅವಶ್ಯಕತೆ ಇರುವುದಿಲ್ಲ.)

2) ಎ) ಕುಟುಂಬದ ವಾರ್ಷಿಕ ಆದಾಯ <u>ರೂ.2.50 ಲಕ್ಷದಿಂದ ರೂ.10.00 ಲಕ್ಷ</u> ದೊಳಗಿನ ಪ್ರಕರಣಗಳಲ್ಲಿ ಪ.ಜಾತಿ ಮತ್ತು ಪ.ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಸಿ.ಇ.ಟಿ/ಪಿ.ಜಿ.ಸಿ.ಇ.ಟಿ ಮುಖಾಂತರ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದಲ್ಲಿ ಅಂತಹವರಿಂದ ಶೇ.50ರಷ್ಟು ಶುಲ್ಕವನ್ನು ಪಡೆದು ಪ್ರವೇಶಾತಿಯನ್ನು ನೀಡುವುದು. ನಂತರ ಉಳಿದ ಶೇ.50ರಷ್ಟು ಶುಲ್ಕವನ್ನು ಸಂಬಂಧಿಸಿದ ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಮತ್ತು ಇತರೆ ಇಲಾಖೆಗಳಿಂದ, ವಿಶ್ವವಿದ್ಯಾಲಯದ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು.

ಬಿ) ಆದರೆ ಪ್ರವೇಶ ಪಡೆಯುವ ಸಮಯದಲ್ಲಿ ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹಾಜರುಪಡಿಸದೇ ಇದ್ದಲ್ಲಿ ಅಂತಹವರಿಂದ ಶುಲ್ಕವನ್ನು ಪಡೆದು ಪ್ರವೇಶಾತಿಯನ್ನು ನೀಡುವುದು. ನಂತರ ಅಂತಹ ಪ್ರಕರಣಗಳನ್ನು ಪರಿಶೀಲಿಸಿ ನಿಯಮಾನುಸಾರ ಶುಲ್ಕವನ್ನು ಸಂಬಂಧಪಟ್ಟ ಇಲಾಖೆಯವರು ಮರು ಪಾವತಿಸುವುದು.

ಸಿ) ಕಾಮೆಡ್–ಕೆ/ ಕೆ.ಆರ್.ಎಲ್.ಎಂ.ಪಿ.ಸಿ.ಎ/ಖಾಸಗಿ/ಡೀಮ್ಡ್ ಯುನಿವರ್ಸಿಟಿ ಮೂಲಕ ಪ.ಜಾತಿ ಮತ್ತು ಪ.ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಸಮಯದಲ್ಲಿ ಶೇ.50ರಷ್ಟು ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದು ಪ್ರವೇಶ ನೀಡುವುದು. ನಂತರ ಶುಲ್ಕದಲ್ಲಿನ ಶೇ: 50 ಪ್ರತಿಶತ ಮೊತ್ತವನ್ನು ಸಂಬಂಧಿಸಿದ ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಮತ್ತು ಇತರೆ ಇಲಾಖೆಗಳಿಂದ, ವಿಶ್ವವಿದ್ಯಾಲಯದ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು.

ಡಿ) ಇತರ ಕಾಲೇಜು/ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಶೇ.50ರಷ್ಟು ಶುಲ್ಕವನ್ನು ಪಡೆದು ಪ್ರವೇಶ ನೀಡುವುದು. ನಂತರ ಶುಲ್ಕದಲ್ಲಿನ ಶೇ: 50 ಪ್ರತಿಶತ ಮೊತ್ತವನ್ನು ಸಂಬಂಧಿಸಿದ ತಾಂತ್ರಿಕ ಶಿಕ್ಷಣ/ವೈದ್ಯಕೀಯ ಶಿಕ್ಷಣ ಮತ್ತು ಇತರೆ ಇಲಾಖೆಗಳಿಂದ, ವಿಶ್ವವಿದ್ಯಾಲಯದ ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮರು ಪಾವತಿಸಲಾಗುವುದು.

----11)

ಇ) ಆದಾಯ ಪ್ರಮಾಣ ಪತ್ರ ಕೋರ್ಸ್ ಅವಧಿಗೆ ಮಾನ್ಯತೆ ಹೊಂದಿರುತ್ತದೆ. (ಕೋರ್ಸ್ ಅವಧಿಯಲ್ಲಿ ಪ್ರತಿ ವರ್ಷವು ಆದಾಯ ಪ್ರಮಾಣ ಪತ್ರ ನವೀಕರಿಸಬೇಕಾಗಿರುವುದಿಲ್ಲ.) ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಉದ್ಯೋಗ ಮಾಡುತ್ತಿರುವ ನೌಕರರು/ಅಧಿಕಾರಿಗಳು ಕಡ್ಡಾಯವಾಗಿ ವೇತನ ಪ್ರಮಾಣ ಪತ್ರ ಹಾಗೂ ಆದಾಯ ತೆರಿಗೆ ಪಾವತಿ ರಿಟರ್ನ್ಸ್‌ನ್ನು ಸಲ್ಲಿಸತಕ್ಕದ್ದು. (ಹಾಗಿದ್ದಲ್ಲಿ ತಹಶೀಲ್ದಾರ್‌ರವರಿಂದ ಆದಾಯ ಪ್ರಮಾಣ ಪತ್ರ ಅವಶ್ಯಕತೆ ಇರುವುದಿಲ್ಲ.)

V. ಮಂಜೂರಾದ ಮೊತ್ತವನ್ನು ಜಮಾ ಮಾಡುವ ವಿಧಾನ

1) ತಾಲ್ಲೂಕು ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕರು ಗ್ರೇಡ್-1 & 2 ಇವರು ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯದೇ ಇರುವ ಪ್ರಕರಣಗಳಲ್ಲಿ ಈ ಆದೇಶದಂತೆ ಶುಲ್ಕ ಮಂಜೂರಾತಿ ನೀಡಿ ಮಂಜೂರಾದ ಶುಲ್ಕವನ್ನು ಕಾಲೇಜು/ಶಿಕ್ಷಣ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಜಮೆ ಮಾಡತಕ್ಕದ್ದು. ಒಂದು ವೇಳೆ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆದಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಮಂಜೂರಾದ ಶುಲ್ಕವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಜಮೆ ಮಾಡತಕ್ಕದ್ದು.

2) ಅದೇ ರೀತಿ ಇತರ ಇಲಾಖೆಗಳ ಮಂಜೂರಾತಿ ಪ್ರಾಧಿಕಾರಿಗಳು ವಿದ್ಯಾರ್ಥಿಗಳಿಂದ ಶುಲ್ಕವನ್ನು ಕಾಲೇಜು/ಶಿಕ್ಷಣ ಸಂಸ್ಥೆಗಳು ಪ್ರವೇಶ ಸಮಯದಲ್ಲಿ ಪಡೆದಿದ್ದಲ್ಲಿ ಈ ಆದೇಶದಂತೆ ಶುಲ್ಕ ಮಂಜೂರಾತಿ ನೀಡಿ ಮಂಜೂರಾದ ಶುಲ್ಕವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಜಮೆ ಮಾಡತಕ್ಕದ್ದು.

3) ಕಾಲೇಜು/ಶಿಕ್ಷಣ ಸಂಸ್ಥೆಗಳಿಗೆ ಮತ್ತು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮಾ ಆಗಿರುವ ವಿವರಗಳನ್ನು ಬ್ಯಾಂಕ್‌ಗಳಿಂದ ಪಡೆದು ದಾಖಲಾತಿಗಳನ್ನು ಸಂಬಂಧಿಸಿದ ಶುಲ್ಕ ಮಂಜೂರಾತಿ ಪ್ರಾಧಿಕಾರಿಗಳು ತಮ್ಮ ಕಚೇರಿಗಳಲ್ಲಿ ನಿರ್ವಹಿಸುವುದು. ಈ ವಿವರಗಳನ್ನು ಆಡಿಟ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

4) ಶುಲ್ಕ ಮಂಜೂರಾತಿ/ಮರು ಪಾವತಿ ವಿಧಾನವನ್ನು ಅಂದರೆ ಅರ್ಜಿಗಳ ಆಹ್ವಾನ, ಮಂಜೂರಾತಿ, ಮತ್ತು ಸಂದಾಯ, ಇತ್ಯಾದಿ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಗಣಕೀಕರಣಗೊಳಿಸತಕ್ಕದ್ದು.

VI. ಶುಲ್ಕ ಮರು ಪಾವತಿ ಬಗ್ಗೆ ಉಸ್ತುವಾರಿ ಸಮಿತಿ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಆದೇಶಗಳಂತೆ ವಿವಿಧ ಇಲಾಖೆಗಳು ನಿಗದಿಪಡಿಸಿರುವ ಶುಲ್ಕಗಳ ಬಗ್ಗೆ ಮತ್ತು ಶುಲ್ಕ ಮರು ಪಾವತಿ ಅನುಷ್ಠಾನದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಈ ಕೆಳಕಂಡಂತೆ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ – ಅಧ್ಯಕ್ಷರು
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ – ಸದಸ್ಯರು
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ – ಸದಸ್ಯರು
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ – ಸದಸ್ಯರು
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ – ಸದಸ್ಯರು
6. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ – ಸದಸ್ಯರು
7. ಜಂಟಿ/ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
8. ಜಂಟಿ ನಿರ್ದೇಶಕರು (ಶಿಕ್ಷಣ) ಸಮಾಜ ಕಲ್ಯಾಣ ಇಲಾಖೆ – ಸದಸ್ಯ ಕಾರ್ಯದರ್ಶಿ

VII. ಇತರ ಷರತ್ತುಗಳು

1. ಕುಟುಂಬದ ವಾರ್ಷಿಕ ವರಮಾನ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.
2. ಶುಲ್ಕ ಮಂಜೂರಾತಿ/ಮರುಪಾವತಿ ಅನುಷ್ಠಾನದ ಬಗ್ಗೆ ಅಗತ್ಯವಿರುವ ಅರ್ಜಿ ನಮೂನೆ ಇತ್ಯಾದಿಗಳನ್ನು ಸಂಬಂಧಿಸಿದ ಇಲಾಖೆಗಳು ನಿರ್ಧರಿಸುವುದು.

---12)

3. ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಗಳು ತಪ್ಪು ಮಾಹಿತಿ ನೀಡಿದ್ದಲ್ಲಿ ಮತ್ತು ಈ ಆದೇಶ ಉಲ್ಲಂಘಿಸಿದಲ್ಲಿ ಅಂತಹವರ ವಿರುದ್ಧ ಸಂಬಂಧಿಸಿದ ಇಲಾಖೆ ಮುಖ್ಯಸ್ಥರುಗಳು ಕ್ರಮ ಕೈಗೊಳ್ಳುವುದು.
   ಎ) ಭಾರತೀಯ ದಂಡ ಸಂಹಿತೆಯ ಕಲಂ 177 & 181 ರ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.
   ಬಿ) ಮೇಲ್ಕಂಡಂತೆ ಕ್ರಮ ಜರುಗಿಸುವುದರ ಜೊತೆಗೆ ಒಟ್ಟು ಪಾವತಿಸಿದ ಶುಲ್ಕವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಸಂಬಂಧಿಸಿದವರಿಂದ ವಸೂಲಿ ಮಾಡಲಾಗುವುದು.
4. ಮಂಜೂರಾತಿ ಅಧಿಕಾರಿಗಳು ಈ ಆದೇಶವನ್ನು ಉಲ್ಲಂಘಿಸಿ ಶುಲ್ಕ ಮರು ಪಾವತಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವುದಲ್ಲದೇ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
5. ಸರ್ಕಾರದ ಈ ಆದೇಶವು 2015-16ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುತ್ತದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 74 ಐಎಂಎಂ 2015, ದಿನಾಂಕ: 23.07.2015 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 769 ವೆಚ್ಚ-3, 2015 ದಿನಾಂಕ:14.09.2015 ಹಾಗೂ ದಿನಾಂಕ: 14.12.2015 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಗಿರಿಜಮ್ಮ) 31/12/2015
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ.
4. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
5. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ.
6. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಕೃಷಿ ಇಲಾಖೆ
7. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ
8. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಕಾರ್ಮಿಕ/ಉದ್ಯೋಗ ಮತ್ತು ತರಬೇತಿ ಇಲಾಖೆ.
9. ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಪಶುಸಂಗೋಪನೆ ಇಲಾಖೆ.
10. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ.
11. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ.
12. ಆಯುಕ್ತರು, ಕೃಷಿ ಇಲಾಖೆ
13. ಆಯುಕ್ತರು, ತೋಟಗಾರಿಕೆ ಇಲಾಖೆ.
14. ಆಯುಕ್ತರು, ರೇಷ್ಮೆ ಇಲಾಖೆ.
15. ಆಯುಕ್ತರು, ಪಶುಸಂಗೋಪನಾ ಇಲಾಖೆ/ಮೀನುಗಾರಿಕೆ ಇಲಾಖೆ.
16. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ
17. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
18. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ.
19. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ.
20. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ
21. ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ/ಯುನಾನಿ

---13)

22. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.
23. ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರಿಗೆ
24. ಎಲ್ಲಾ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
25. ಎಲ್ಲಾ ಸಹಾಯಕ ನಿರ್ದೇಶಕರು ಗ್ರೇಡ್-1 ಮತ್ತು ಗ್ರೇಡ್-2, ಸಮಾಜ ಕಲ್ಯಾಣ ಇಲಾಖೆ.
(ಕ್ರ.ಸಂ.22 ರಿಂದ 25 ರವರೆಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಮೂಲಕ).
26. ಎಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿಗಳು. (ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ನಿರ್ದೇಶನಾಲಯ ಇವರ ಮೂಲಕ).
27. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕ.
4. ಸರ್ಕಾರದ ಉಪ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕ.
5. ನಿರ್ದೇಶಕರು, ಯೋಜನಾ ಇಲಾಖೆ, (ಟಿಪ್ಪಣಿ ಸಂಖ್ಯೆ: ಪಿಡಿ 74 ಐಎಂಎಂ 2015, ದಿನಾಂಕ: 23.07.2015)
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ಟಿಪ್ಪಣಿ ಸಂಖ್ಯೆ: ಆಇ 769 ವೆಚ್ಚ-3, 2015 ದಿನಾಂಕ:14.09.2015 ರಲ್ಲಿ ಮತ್ತು 14.12.2015).
7. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ:206, 2 ನೇ ಮಹಡಿ, ವಿಧಾನಸೌಧ

****

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-2007-08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ರಾಜ್ಯದ್ಯಂತ ಪ್ರತಿಷ್ಠಿತ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸುವ ಬಗ್ಗೆ.

ಓದಲಾಗಿದೆ:1.ಸರ್ಕಾರದ ಆದೇಶ ಸಂ:ಎಸ್‌ಡಬ್ಲ್ಯೂಎಲ್ 223 ಎಸ್‌ಡಬ್ಲ್ಯೂ 76,ದಿ:9-6-1981.

2.ಸರ್ಕಾರದ ಆದೇಶ ಸಂ: ಎಸ್‌ಡಬ್ಲ್ಯೂಎಲ್ 14 ಎಸ್‌ಡಬ್ಲ್ಯೂ 85,ದಿ:16-4-1985.

3.ದಿನಾಂಕ:25-4-2007ರ ಎಂ.ಎಂ.ಆರ್.ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ.

4.ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಇವರ ಪತ್ರದ ಸಂ:ಸಕಇ:ಇಡಿ-7:ಸಿಆರ್-1:07-08 ದಿನಾಂಕ:21-4-2007.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ(1)ಮತ್ತು (2)ರ ಆದೇಶಗಳಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ಪ್ರಸ್ತುತ ರಾಜ್ಯದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮತ್ತು ಬೆಂಗಳೂರಿನ ಜನಸೇವಾ ವಿದ್ಯಾ ಕೇಂದ್ರದಂತಹ ಪ್ರತಿಷ್ಠಿತ ಶಾಲೆಗಳಿಗೆ ಇಲಾಖೆಯಿಂದ ವಿನಿಯೋಜಿಸಲ್ಪಟ್ಟು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಪ್ರತಿಭಾವಂತ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ಮಕ್ಕಳಿಗೆ ಪ್ರವೇಶಾವಕಾಶ ಕಲ್ಪಿಸಿ ವಿದ್ಯಾಭ್ಯಾಸದ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಭರಿಸುವ ಯೋಜನೆಯು ಜಾರಿಯಲ್ಲಿರುತ್ತದೆ.

ಮೇಲೆ ಓದಲಾದ ಕ್ರಮ(3)ರ ದಿನಾಂಕ:25-4-2007ರ ಎಂ.ಎಂ.ಆರ್. ಸಭೆಯಲ್ಲಿ 2007-08ನೇ ಸಾಲಿಗೆ ಮುಂದುವರೆದ ಯೋಜನೆಗಳನ್ನು ಮುಂದುವರೆಸಲು ತೀರ್ಮಾನವಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ(4)ರ ಪತ್ರದಲ್ಲಿ ಮೈಸೂರು ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಮಾತ್ರ ಇರುವ ಈ ಎರಡು ಶಾಲೆಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಲೆಗಳು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸುತ್ತಿರುವುದರಿಂದ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಈ ಯೋಜನೆಯ ಪ್ರಯೋಜನವು ದೊರೆಯುತ್ತಿಲ್ಲವಾದ ಕಾರಣ ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸುವುದು ಅನಿವಾರ್ಯ ಹಾಗೂ ಅವಶ್ಯಕವಾಗಿರುತ್ತದೆ. ಅದರನ್ವಯ 2007-08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಸೇರಿದ 1000 ಬುದ್ಧಿವಂತ ಅರ್ಹ ವಿದ್ಯಾರ್ಥಿಗಳಿಗೆ ಜಿಲ್ಲೆಗಳಲ್ಲಿರುವ ಪ್ರತಿಷ್ಠಿತ ವಸತಿ ಮತ್ತು ವಸತಿಯೇತರ ಶಾಲೆಗಳಲ್ಲಿ ಪ್ರವೇಶ ಪಡೆಯಲು ಅನುಕೂಲವಾಗುವಂತೆ ರೂ.2.00ಕೋಟಿಗಳನ್ನು ಪ್ರಸಕ್ತ ಸಾಲಿನ ರಾಜ್ಯವಲಯ ಆಯವ್ಯಯ, ಲೆಕ್ಕಶೀರ್ಷಿಕೆಯೋಜನೆ 2225-01-277-0-12ರಡಿ ಈ ಯೋಜನೆಗಾಗಿ ಒದಗಿಸಲಾಗಿದೆ. ಆದಕಾರಣ ಪ್ರತಿ ಜಿಲ್ಲೆಯ ಎರಡು ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 5 ನೇ ತರಗತಿಯಿಂದ ಪ್ರವೇಶಾವಕಾಶ ಕಲ್ಪಿಸಲು ಹಾಗೂ ವಸತಿ ಶಾಲೆಯಾದಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ನಿಗದಿ ಪಡಿಸಿರುವ ನಿರ್ವಹಣಾ ವೆಚ್ಚಕ್ಕೆ ಸೀಮಿತಗೊಳಿಸಿ ಇಂತಹ ಪ್ರತಿಷ್ಠಿತ ಶಾಲೆಗಳಲ್ಲಿ ವಸತಿ ಸೌಲಭ್ಯವಿಲ್ಲದಿದ್ದಲ್ಲಿ,

2007-08ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಈ ಯೋಜನೆಯನ್ನು ವಿಸ್ತರಿಸಲು ಪ್ರತಿಷ್ಠಿತ ಶಾಲೆಗಳಲ್ಲಿ ಮೇ ಮಾಹೆಯಿಂದಲೇ ಪ್ರವೇಶಾವಕಾಶ ಪ್ರಾರಂಭಗೊಳ್ಳುವುದರಿಂದ ಈ ಯೋಜನೆಯಡಿ ಒದಗಿಸಿರುವ ರೂ.200.00ಲಕ್ಷಗಳನ್ನು ನಾಲ್ಕು ಸಮ ಕಂತುಗಳಲ್ಲಿ ರೂ.50.00 ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಸಮಾಜ ಕಲ್ಯಾಣ ಆಯುಕ್ತರು ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ 195 ಪಕವಿ 2007

ಬೆಂಗಳೂರು,ದಿ:5-5-2007.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ 2007-08ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರತಿ ಜಿಲ್ಲೆಯ ಎರಡು ಪ್ರತಿಷ್ಠಿತ ಶಾಲೆಗಳಲ್ಲಿ ಪ್ರಸ್ತಾವನೆಯಲ್ಲಿ ಕಾಣಿಸಿರುವ ಷರತ್ತುಗಳಿಗೊಳಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಯೋಜನೆಯನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ,
ಮತ್ತು ಅವರ ಹೆಸರಿನಲ್ಲಿ.

(ಹೆಚ್. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.
ನಾ 7/5.

ಗೆ,

1.ಮಹಾಲೇಖಪಾಲರು,ಕರ್ನಾಟಕ,ಬೆಂಗಳೂರು.
2.ಆಯುಕ್ತರು ಸಮಾಜ ಕಲ್ಯಾಣ ಇಲಾಖೆ,ಬೆಂಗಳೂರು.
3.ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು.
4.ನಿರ್ದೇಶಕರು,ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,ಬೆಂಗಳೂರು.
5ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು.(ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ಇವರ ಮುಖಾಂತರ)
6.ಎಲ್ಲಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು
7.ಶಾಖಾ ರಕ್ಷಾ ಕಡತ:ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2007-08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ರಾಜ್ಯಾದ್ಯಂತ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ದಾಖಲಿಸುವ ಬಗ್ಗೆ ಪರಿಷ್ಕೃತ ಆದೇಶ.

ಓದಲಾಗಿದೆ: 1. ಸರ್ಕಾರದ ಆದೇಶ ಸಂ: ಸಕಇ 195 ಪಕವಿ 2007 ದಿ: 05.05.2007

2. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಕನಿ:ಇಡಿ7 ಸಿಆರ್-1:07-08 ದಿ:01.12.07, 10.01.08 ಮತ್ತು 01-03-2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂ:(1)ರ ಆದೇಶದಲ್ಲಿ 2007-08ನೇ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸುವ ವಿಷಯವಾಗಿ 2007-08ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರತಿ ಜಿಲ್ಲೆಯ ಎರಡು ಪ್ರತಿಷ್ಠಿತ ಶಾಲೆಗಳಲ್ಲಿ ಸದರಿ ಆದೇಶದ ಪ್ರಸ್ತಾವನೆಯಲ್ಲಿ ಕಾಣಿಸಲಾಗಿರುವ ಷರತ್ತುಗಳಿಗೊಳಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಯೋಜನೆಯನ್ನು ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂ:(2)ರ ಪತ್ರದಲ್ಲಿ ಆಯುಕ್ತರು,ಸಮಾಜ ಕಲ್ಯಾಣ ಇಲಾಖೆ ಇವರು 2007-08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ರಾಜ್ಯಾದ್ಯಂತ ಪ್ರತಿಷ್ಠಿತ ಶಾಲೆಗಳ ಪ್ರತಿಭಾವಂತ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ದಾಖಲಿಸುವ ಕುರಿತು ದಿ:05.05.2007ರಲ್ಲಿ ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಿ ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

1. ಬಡತನ ರೇಖೆಗಿಂತ ಕೆಳಗಿನ ಮಕ್ಕಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.75,000/- ಗಳ ಮಿತಿಯೊಳಗಿರುವವರು ಅರ್ಹರಾಗಿರುತ್ತಾರೆ.
2. ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ರಚಿಸುವ ಸಮಿತಿಯು
   ಜಿಲ್ಲಾಧಿಕಾರಿಗಳು - ಅಧ್ಯಕ್ಷರು
   ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು - ಸದಸ್ಯ ಕಾರ್ಯದರ್ಶಿಗಳು
   ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ - ಸದಸ್ಯರು
   ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು - ಸದಸ್ಯರು
   ಇವರುಗಳನ್ನು ಒಳಗೊಂಡಿರಬೇಕಾಗಿರುತ್ತದೆ.
3. ಪ್ರತಿಷ್ಠಿತ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ದಾಖಲಿಸಲು ಆಯಾ ಜಿಲ್ಲೆಯ ಡಯಟ್ ಕೇಂದ್ರಗಳ ಮುಖಾಂತರ ಪ್ರವೇಶ ಪರೀಕ್ಷೆಯನ್ನು ನಡೆಸಬೇಕು.
4. ಒಂದು ಕುಟುಂಬದಲ್ಲಿ ಒಬ್ಬ ಬಾಲಕ ಮತ್ತು ಒಬ್ಬ ಬಾಲಕಿ, ಬಾಲಕ ಇಲ್ಲದಿದ್ದಲ್ಲಿ ಇಬ್ಬರು ಬಾಲಕಿಯರಿಗೆ ಅವಕಾಶ ಕಲ್ಪಿಸುವುದು.
5. ಬಾಲಕಿಯರಿಗೆ ಶೇ.50ರಷ್ಟು ಮೀಸಲಾತಿಯನ್ನು ಕಲ್ಪಿಸುವುದು.

5. ಬಾಲಕಿಯರಿಗೆ ಶೇ.50ರಷ್ಟು ಮೀಸಲಾತಿಯನ್ನು ಕಲ್ಪಿಸುವುದು.
6. ವಿದ್ಯಾರ್ಥಿಗಳ ಪ್ರಗತಿ ಪರಿಶೀಲನೆಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಸಂಬಂಧಪಟ್ಟ ಶಾಲೆಗಳಿಂದ ಪ್ರಗತಿ ಪತ್ರ (ಪ್ರೋಗ್ರೆಸ್ ಕಾರ್ಡ್) ಪಡೆಯತಕ್ಕದ್ದು.
7. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಹಾಗೂ ಪೋಷಕರ ಸಭೆಯನ್ನು ವಾರ್ಷಿಕವಾಗಿ ನಡೆಸುವುದು.
8. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಸಂಬಂಧಪಟ್ಟ ಪ್ರತಿಷ್ಠಿತ ಶಾಲೆಗಳಿಗೆ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚಕ್ಕಾಗಿ ಅನುದಾನವನ್ನು ವಿಳಂಬಗೊಳಿಸದೇ ಬಿಡುಗಡೆಗೊಳಿಸತಕ್ಕದ್ದು.

ಸದರಿ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಭಾರತದ ರಾಷ್ಟ್ರಾಧ್ಯಕ್ಷರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

4/3/08

(ಮ.ಹ. ಚಿದಾನಂದಸ್ವಾಮಿ).
ಸರ್ಕಾರದ ಅಧೀನ ಕಾರ್ಯದರ್ಶಿಗಳು-1.
ಸಮಾಜ ಕಲ್ಯಾಣ ಇಲಾಖೆ.
4/3/08

ಗೆ,
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು.
(ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ಇವರ ಮುಖಾಂತರ)
6. ಎಲ್ಲಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

13

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಕಇ 195 ಪಕವಿ20007

ಕರ್ನಾಟಕ ಸರ್ಕಾರದ ಸಚಿವಾಲಯ
2ನೇ ಮಹಡಿ.ವಿಕಾಸ ಸೌಧ
ದಿನಾಂಕ:19-5-2007

<u>ತಿದ್ದುಪಡಿ</u>

ಸಕಾರದ ಆದೇಶ ಸಂಖ್ಯೆ. ಸಕಇ 195 ಪಕವಿ 2007,ದಿನಾಂಕ:5-5-2007ರ ಆದೇಶ ಭಾಗದ ಎರಡನೇ ಸಾಲಿನಲ್ಲಿ ನಮೂದಿಸಿರುವ "<u>ಪ್ರತಿ ಜಿಲ್ಲೆಯ ಎರಡು ಪ್ರತಿಷ್ಠಿತ</u> ಶಾಲೆಗಳಲ್ಲಿ" ಎಂಬುವನ್ನು "ರಾಜ್ಯದಲ್ಲಿನ ಪ್ರತಿಷ್ಠಿತ ಶಾಲೆಗಳಲ್ಲಿ" ಎಂದು ಮತ್ತು ಸದರಿ ಆದೇಶದ 3ನೇ ಸಾಲಿನಲ್ಲಿ ನಮೂದಿಸಿರುವ "ವಿದ್ಯಾರ್ಥಿಗಳಿಗೆ" ಎಂಬುದನ್ನು "ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಹೆಚ್. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ,ಬೆಂಗಳೂರು.
3. ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು.
4. ನಿರ್ದೇಶಕರು,ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ. ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು(ಆಯುಕ್ತರು ಸಮಾಜ ಕಲ್ಯಾಣ ಇಲಾಖೆ,ಬೆಂಗಳೂರು ಇವರ ಮುಖಾಂತರ
6. ಎಲ್ಲಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು
7. ಶಾಖಾ ರಕ್ಷಾಕಡತ:ಹೆಚ್ಚುವರಿ ಪ್ರತಿಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರತಿಭಾವಂತ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶವನ್ನು ಕಲ್ಪಿಸುವ ಬಗ್ಗೆ ಪರಿಷ್ಕೃತ ಆದೇಶ.

- - - - -

ಪ್ರಸ್ತಾವನೆ:-

ಮೇಲ್ಕಂಡ ಯೋಜನೆ 1995 ರಿಂದ ಶ್ರೀ ರಾಮಕೃಷ್ಣ ವಿದ್ಯಾಲಯ, ಮೈಸೂರು ಮಾದರಿಯಲ್ಲಿ ಇತರೆ ಶಾಲೆಗಳಲ್ಲಿಯೂ ಸಹ ಅನ್ವಯಿಸುವಂತೆ ಜಾರಿಯಲ್ಲಿರುತ್ತದೆ. ಸರ್ಕಾರಿ ಆದೇಶ ಸಂ. ಸಕಇ 453 ಪಕವಿ 2007(i) ದಿನಾಂಕ 27.02.2008 ರಲ್ಲಿ ಕೆಲವು ಮಾರ್ಗಸೂಚನೆಗಳನ್ನು ನೀಡಲಾಗಿದೆ. ಆದರೆ, ಈಗ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭಗೊಂಡಿದ್ದು ಮತ್ತು ಆರ್.ಟಿ.ಇ. ಕಾಯ್ದೆ ಬಂದಿರುವುದರಿಂದ ಮತ್ತು ಕೆಲವು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಲೋಪದೋಷಗಳು ಕಂಡು ಬಂದಿರುವುದನ್ನು ಗಮನಿಸಲಾಗಿದೆ. ಆದಕಾರಣ ಈ ಯೋಜನೆಯಡಿಯಲ್ಲಿ ಹೊಸದಾಗಿ ಪ್ರವೇಶ ನೀಡುವುದನ್ನು ನಿಲ್ಲಿಸಲಾಗಿದೆ.

ಆದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಪ್ರತಿನಿಧಿಗಳಿಂದ ಮತ್ತು ಚುನಾಯಿತ ಪ್ರತಿನಿಧಿಗಳಿಂದ ಈ ಯೋಜನೆಯನ್ನು ನಿಲ್ಲಿಸಬಾರದೆಂದು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಪ್ರತಿಷ್ಠಿತ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಲು ಮತ್ತೆ ಈ ಯೋಜನೆಯನ್ನು ಮುಂದುವರಿಸಬೇಕೆಂದು ಒತ್ತಾಯಿಸಿದ್ದಾರೆ.

ಮಾನ್ಯ ಸಮಾಜ ಕಲ್ಯಾಣ ಸಚಿವರು ವಿಚಾರಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಚುನಾಯಿತ ಪ್ರತಿನಿಧಿಗಳಾದ ಮಾನ್ಯ ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಸಭೆಯಲ್ಲಿ ಕೂಡಾ ಈ ಯೋಜನೆಯನ್ನು ಮುಂದುವರೆಸಲು ಒತ್ತಾಯಿಸಿದ್ದಾರೆ. ಈ ಹಿನ್ನಲೆಯಲ್ಲಿ ಪ್ರತಿಷ್ಠಿತ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸುವ ಯೋಜನೆಯನ್ನು ಈಗಿರುವ ಕೆಲವು ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಮುಂದುವರೆಸಲು ತೀರ್ಮಾನಿಸಲಾಯಿತು. ಆದ್ದರಿಂದ ಈ ಕೆಳಕಂಡ ಸರ್ಕಾರಿ ಆದೇಶ.

ಸರ್ಕಾರಿ ಆದೇಶ ಸಂ. ಸಕಇ 62 ಪಕವಿ 2013, ಬೆಂಗಳೂರು, ದಿನಾಂಕ: 12.06.2013

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬುದ್ಧಿವಂತ ಅರ್ಹ ವಿದ್ಯಾರ್ಥಿಗಳಿಗೆ ಆಯಾ ಜಿಲ್ಲೆಗಳಲ್ಲಿರುವ ಪ್ರತಿಷ್ಠಿತ ವಸತಿ ಮತ್ತು ವಸತಿಯೇತರ ಶಾಲೆಗಳಲ್ಲಿ 2013-14ನೇ ಸಾಲಿನಿಂದ 6ನೇ ತರಗತಿಯಿಂದ ಪ್ರವೇಶಾವಕಾಶ ಕಲ್ಪಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರಿ ಅನುಮತಿ ನೀಡಲಾಗಿದೆ.

ಷರತ್ತುಗಳು:-

1) ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.

2) ಆದಾಯ ಮಿತಿ — ವಿದ್ಯಾರ್ಥಿ ಕುಟುಂಬದ ಆದಾಯ ಮಿತಿ ರೂ. 2.00 ಲಕ್ಷಗಳೊಳಗಿರಬೇಕು.

3) ಪ್ರತಿಷ್ಠಿತ ಶಾಲೆಯನ್ನು ಗುರುತಿಸುವ ವಿಧಾನ — ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಪ್ರತಿಷ್ಠಿತ ಶಾಲೆಗಳನ್ನು ಸಮಾಜ ಕಲ್ಯಾಣ ಆಯುಕ್ತರು ಮತ್ತು ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರು ಜಂಟಿಯಾಗಿ ಗುರುತಿಸಿ ಮಾನ್ಯತೆ ನೀಡುವುದು. ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪ್ರವೇಶ ನೀಡುವುದು. ಮಾನ್ಯತೆ ನೀಡುವಾಗ ವಾರ್ಷಿಕ ವೆಚ್ಚವನ್ನು ನಿಗದಿಪಡಿಸುವುದು.

   1) ಆ ಶಾಲೆ ಕನ್ನಡ / ಆಂಗ್ಲ ಮಾಧ್ಯಮದಾಗಿರಬೇಕು.
   2) ವಸತಿ ಸೌಕರ್ಯ ಇರುವ ಶಾಲೆಗಳಿಗೆ ಆದ್ಯತೆ ನೀಡುವುದು.
   3) ಆ ಶಾಲೆಯಲ್ಲಿ ಪ್ರತಿ ವರ್ಷ ಎಸ್.ಎಸ್.ಎಲ್.ಸಿ.ಯಲ್ಲಿ ಶೇ.80% ಹೆಚ್ಚಿನ ವಿದ್ಯಾರ್ಥಿಗಳು ಉತ್ತೀರ್ಣರಾಗಿರಬೇಕು.
   4) ಆ ಶಾಲೆಯಲ್ಲಿ ಎಲ್ಲಾ ರೀತಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಮೂಲಭೂತ ಸೌಕರ್ಯಗಳು ಇರತಕ್ಕದ್ದು.

ಮೇಲ್ಕಂಡ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-01-102-0-08 ಇದರಲ್ಲಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲೆಕ್ಕ ಶೀರ್ಷಿಕೆ 2225-02-283-0-02 ಯಡಿಯಲ್ಲಿ ಭರಿಸತಕ್ಕದ್ದು. ಇದು ಮುಂದುವರೆಸುವ ಯೋಜನೆ ಆಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

12/6/13
(ಸಿದ್ದಿಕ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ.

ಗೆ.

1. ಮಹಾಲೇಖಪಾಲರು. ಕರ್ನಾಟಕ. ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು. ಆರ್ಥಿಕ ಇಲಾಖೆ(ವೆಚ್ಚ). ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
5. ಆಯುಕ್ತರು. ಸಮಾಜ ಕಲ್ಯಾಣ ಇಲಾಖೆ. ಬೆಂಗಳೂರು.
6. ಆಯುಕ್ತರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಬೆಂಗಳೂರು.
7. ನಿರ್ದೇಶಕರು. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ. ಬೆಂಗಳೂರು.
8. ಕಾರ್ಯನಿರ್ವಾಹಕ ನಿರ್ದೇಶಕರು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. ಬೆಂಗಳೂರು.
9. ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ ಯೋಜನಾ ಸಮನ್ವಯಾಧಿಕಾರಿಗಳು. (ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಮುಖಾಂತರ)
10. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ. ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು. ಸಮಾಜ ಕಲ್ಯಾಣ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿಗಳು. 1 ಮತ್ತು 2. ಸ.ಕ.ಇ ವಿಕಾಸಸೌಧ. ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಂತಹ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ದಾಖಲಿಸಲು ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಎಲ್ 223 ಎಸ್‌ಇಡಬ್ಲ್ಯೂ 76 ದಿನಾಂಕ: 09-06-1981

2) ಸರ್ಕಾರದ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಎಲ್ 14 ಎಸ್‌ಇಡಬ್ಲ್ಯೂ 85 ದಿನಾಂಕ: 16-04-1985

3) ಸರ್ಕಾರದ ಆದೇಶ ಸಂಖ್ಯೆ:ಸಕಇ 195 ಪಕವಿ 2007 ದಿನಾಂಕ:05-05-2007 ಮತ್ತು ತಿದ್ದುಪಡಿ ಆದೇಶ ದಿನಾಂಕ:19-05-2007

4) ಸರ್ಕಾರದ ಆದೇಶ ಸಂಖ್ಯೆ:ಸಕಇ 458 ಪಕವಿ 2007(1) ದಿನಾಂಕ:27-02-2008

5) ಸರ್ಕಾರದ ಆದೇಶ ಸಂಖ್ಯೆ:ಸಕಇ 62 ಪಕವಿ 2013 ದಿನಾಂಕ:12-06-2013

6) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ:ಸಕಲ/ಇಡಿ-7/ಸಿಆರ್-25/2013-14 ದಿನಾಂಕ:17-03-2014

7) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಪವಕನಿ/ಇಡಿ-4/ಪ್ರಶಾಲೆ/ಸಿಆರ್-1/2014-15 ದಿನಾಂಕ:15-04-2014

****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮಸಂಖ್ಯೆ(1)ರಲ್ಲಿನ ಸರ್ಕಾರದ ಆದೇಶ ದಿನಾಂಕ:09-06-1981ರಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಮೈಸೂರು ಇಲ್ಲಿಗೆ ಪ್ರತಿ ವರ್ಷ 10 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ದಾಖಲಿಸಲು ಹಾಗೂ ಇವರ ವಿದ್ಯಾಭ್ಯಾಸಕ್ಕಾಗಿ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ.3,000/-ಗಳಂತೆ ಒಟ್ಟು ರೂ.30,000/-ಗಳನ್ನು ಭರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ನಂತರ ದಿನಾಂಕ:08-10-1984ರ ಆದೇಶದಲ್ಲಿ ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ ಪ್ರತಿ ವರ್ಷ 05 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ದಾಖಲಿಸಲು ಹಾಗೂ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ.4,250/-ರಂತೆ ವೆಚ್ಚ ಭರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ(2)ರಲ್ಲಿನ ಸರ್ಕಾರದ ಆದೇಶ ದಿನಾಂಕ:16-04-1985ರಲ್ಲಿ ಪ್ರತಿ ವಿದ್ಯಾರ್ಥಿಯ ವೆಚ್ಚಗಳನ್ನು 1985-86ನೇ ಸಾಲಿನಿಂದ ರೂ.4,250/-ಗಳಿಂದ ರೂ.5,650/-ಕ್ಕೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ(3)ರಲ್ಲಿನ ಸರ್ಕಾರದ ಆದೇಶ ದಿನಾಂಕ:05-05-2007 ಮತ್ತು ತಿದ್ದುಪಡಿ ಆದೇಶ ದಿನಾಂಕ:19-05-2007ರಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಮೈಸೂರು ಮತ್ತು ಜನಸೇವಾ ವಿದ್ಯಾಕೇಂದ್ರದಂತಹ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿ, ಆಯಾ ಜಿಲ್ಲೆಯ ಡಿಡಿಪಿಐ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಆಯ್ಕೆ ಸಮಿತಿ ಮೂಲಕ ಪ್ರತಿಷ್ಠಿತ ಶಾಲೆಗಳನ್ನು ಗುರುತಿಸಿ, ಅಂತಹ ಶಾಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ದಾಖಲಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

---2)

(3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ರೂ.2.00 ಲಕ್ಷಗಳ ಒಳಗೆ ಇರತಕ್ಕದ್ದು. ಅಭ್ಯರ್ಥಿಯು ಸಲ್ಲಿಸಿದ ಆದಾಯ ಪ್ರಮಾಣ ಪತ್ರದ ಮೇಲೆ ಪ್ರವೇಶ ನೀಡಲಾಗಿದ್ದು, ಒಂದು ವೇಳೆ ಸದರಿ ಆದಾಯ ಪ್ರಮಾಣ ಪತ್ರವು ಸುಳ್ಳು ಎಂದು ಕಂಡುಬಂದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

(4) ಒಂದು ಕುಟುಂಬದಲ್ಲಿ ಗರಿಷ್ಟ 2 ಮಕ್ಕಳಿಗೆ ಅಂದರೆ ಒಬ್ಬ ಬಾಲಕ ಮತ್ತು ಬಾಲಕಿಗೆ ಅವಕಾಶ ಕಲ್ಪಿಸುವುದು. ಬಾಲಕ ಇರದಿದ್ದಲ್ಲಿ ಇಬ್ಬರು ಬಾಲಕಿಯರಿಗೆ ಅವಕಾಶ ಕಲ್ಪಿಸುವುದು.

(5) ಸದರಿ ವಸತಿ ಶಾಲೆಗಳಲ್ಲಿ ಇತರೆ ವಿದ್ಯಾರ್ಥಿಗಳಿಗೆ ನಿರ್ಣಯಿಸಿರುವ ವಾರ್ಷಿಕ ವೆಚ್ಚಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೂ ಎರಡು ಕಂತುಗಳಲ್ಲಿ ವಿಳಂಬವಿಲ್ಲದೆ ಪಾವತಿಸುವುದು.

ಈ ಸಂಬಂಧದ ವೆಚ್ಚವನ್ನು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ತಗಲುವ ವೆಚ್ಚವನ್ನು ರಾಜ್ಯವಲಯ ಯೋಜನಾ ಲೆಕ್ಕಶೀರ್ಷಿಕೆ 2225-01-800-0-19ರಡಿ ಒದಗಿಸಿರುವ ಅನುದಾನದಿಂದ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ತಗಲುವ ವೆಚ್ಚವನ್ನು ರಾಜ್ಯವಲಯ ಯೋಜನಾ ಲೆಕ್ಕಶೀರ್ಷಿಕೆ 2225-02-277-0-36ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ

ಪ್ರತಿಗಳು:

1) ಮಹಾಲೇಖಪಾಲರು (ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ/ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ
5) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 & 9), ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ
8) ಸರ್ಕಾರದ ಉಪ ಕಾರ್ಯದರ್ಶಿ-1, 2 ಮತ್ತು 3, ಸಮಾಜ ಕಲ್ಯಾಣ ಇಲಾಖೆ
9) ಸರ್ಕಾರದ ಅಧೀನ ಕಾರ್ಯದರ್ಶಿ-1, 2 ಮತ್ತು 3, ಸಮಾಜ ಕಲ್ಯಾಣ ಇಲಾಖೆ
10) ಪ್ರಾಂಶುಪಾಲರು, ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಯಾದವಗಿರಿ, ಮೈಸೂರು/ ಜನಸೇವಾ ವಿದ್ಯಾ ಕೇಂದ್ರ ಚನ್ನೇನಹಳ್ಳಿ, ಬೆಂಗಳೂರು,
11) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

******

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18 ನೇ ಸಾಲಿನಲ್ಲಿ ರಾಜ್ಯದ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ನೀಡಬೇಕಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಗುರಿಯನ್ನು ಪರಿಷ್ಕರಿಸಿ ಜಿಲ್ಲಾವಾರು ಪರಿಷ್ಕೃತ ಗುರಿಯನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಸಕಇ 506 ಪಕವಿ 2015 ದಿನಾಂಕ:28.05.2016.

2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇವರ ಪತ್ರ ಸಂಖ್ಯೆ:ಪವಕನಿ:ಇಡಿ-4ಸಿಆರ್:01:2016-17, ದಿನಾಂಕ:11.04.2017.

****

ಪ್ರಸ್ತಾವನೆ:

2016-17 ನೇ ಸಾಲಿನಲ್ಲಿ ರಾಜ್ಯದ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ಕಲ್ಪಿಸುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಜಿಲ್ಲಾವಾರು ಗುರಿಯನ್ನು ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ: 28.05.2016 ಆದೇಶದಲ್ಲಿ ಪರಿಷ್ಕರಿಸಲಾಗಿರುತ್ತದೆ.

2016-17 ನೇ ಸಾಲಿನಲ್ಲಿ ಜಿಲ್ಲಾವಾರು ಪ್ರತಿಷ್ಠಿತ ಶಾಲೆಗಳಿಗೆ ದಾಖಲಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿವರಗಳನ್ನು ಪರಿಶೀಲಿಸಿದಾಗ 21 ಜಿಲ್ಲೆಗಳಲ್ಲಿ ನಿಗದಿತ ಗುರಿಗಿಂತ ಕಡಿಮೆ ದಾಖಲಾಗಿರುವುದು ಕಂಡುಬಂದಿರುತ್ತದೆ. ವ್ಯರ್ಥವಾಗುವ ಸೀಟುಗಳನ್ನು ಬೇಡಿಕೆಯಿರುವ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡುವುದು ಅವಶ್ಯವಾಗಿರುವುದರಿಂದ, 2017-18 ನೇ ಸಾಲಿನಿಂದ ಜಿಲ್ಲಾವಾರು ಪರಿಷ್ಕೃತ ಗುರಿ ನಿಗದಿಪಡಿಸುವಂತೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:11.04.2017ರ ಪತ್ರದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಕೋರಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 319 ಪಕವಿ 2017 ಬೆಂಗಳೂರು, ದಿನಾಂಕ:26.05.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ 2017-18 ನೇ ಸಾಲಿನಲ್ಲಿ ರಾಜ್ಯದ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ಕಲ್ಪಿಸುವ ಸಂದರ್ಭದಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಜಿಲ್ಲಾವಾರು ಗುರಿಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

ಕ್ರ ಸಂ	ಜಿಲ್ಲೆಯ ಹೆಸರು	2016-17 ನೇ ಸಾಲಿನ ಸರ್ಕಾರದಿಂದ ನಿಗದಿಪಡಿಸಿದ ವಿದ್ಯಾರ್ಥಿಗಳ ಗುರಿ	2017-18 ನೇ ಸಾಲಿನಿಂದ ಪರಿಷ್ಕೃತವಾಗಿ ನಿಗದಿಪಡಿಸುವ ಪರಿಷ್ಕೃತ ವಿದ್ಯಾರ್ಥಿಗಳ ಗುರಿ
1	ಬೆಂಗಳೂರು (ಗ್ರಾ)	13	15
2	ಬೆಂಗಳೂರು (ನ)	12	12
3	ರಾಮನಗರ	12	10
4	ದಾವಣಗೆರೆ	23	23
5	ಕೋಲಾರ	05	05
6	ಚಿಕ್ಕಬಳ್ಳಾಪುರ	25	25
7	ಚಿತ್ರದುರ್ಗ	42	42
8	ತುಮಕೂರು	12	12
9	ಶಿವಮೊಗ್ಗ	10	10
10	ಮೈಸೂರು	15	15
11	ಮಂಡ್ಯ	05	05
12	ಹಾಸನ	05	05
13	ಚಾಮರಾಜನಗರ	30	30
14	ಚಿಕ್ಕಮಗಳೂರು	14	14

ಕರ್ನಾಟಕ ಸರ್ಕಾರದ ನಡವಳಿಗಳು

365

ವಿಷಯ: ಪ್ರತಿಭಾವಂತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶವನ್ನು ಕಲ್ಪಿಸಲು ಪರಿಷ್ಕೃತ ಮಾರ್ಪಾಡು ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಸಕಇ 62 ಪಕವಿ 2013, ದಿನಾಂಕ: 12-06-2013

2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ:ಸಕನಿ /ಇಡಿ-7/ಸಿಆರ್-15/2016-17, ದಿನಾಂಕ: 03-03-2017

****

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಬುದ್ಧಿವಂತ ಮತ್ತು ಅರ್ಹ ವಿದ್ಯಾರ್ಥಿಗಳನ್ನು ಮಾಜ ಕಲ್ಯಾಣ ಇಲಾಖೆಯು ಗುರುತಿಸಿ, ಮಾನ್ಯತೆ ನೀಡಿದ ಪ್ರತಿಷ್ಠಿತ ವಸತಿ ಮತ್ತು ವಸತಿಯೇತರ ಾಲೆಗಳಿಗೆ 2013-14 ನೇ ಸಾಲಿನಿಂದ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ:12-06-2013 ರ ದೇಶದಲ್ಲಿ 6 ನೇ ತರಗತಿಯಿಂದ ಪ್ರವೇಶ ಅವಕಾಶ ಕಲ್ಪಿಸಿ, ಆದೇಶಿಸಿದೆ.

ಪ್ರತಿಷ್ಠಿತ ಶಾಲೆಯ ಆಯ್ಕೆ ಮತ್ತು ವಿದ್ಯಾರ್ಥಿಗಳ ಪ್ರವೇಶ ಅವಕಾಶ ಕಲ್ಪಿಸುವ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ:ಸಕಇ 62 ಪಕವಿ 2013, ದಿನಾಂಕ:12-06-2013 ಹಾಗೂ ದಿನಾಂಕ:11-04-2014 ರಲ್ಲಿನ ಷರತ್ತುಗಳನ್ನು ಈ ಕೆಳಕಂಡಂತೆ ಮಾರ್ಪಡಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ:03-03-2017 ರ ಪತ್ರದಲ್ಲಿ ಕೋರಿರುತ್ತಾರೆ.

1. ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಲಾಟರಿ ಮುಖಾಂತರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಆಯ್ಕೆ ಮಾಡಲಾಗುತ್ತಿದೆ. ಆದರೆ ವಿದ್ಯಾರ್ಥಿಗಳನ್ನು ಅರ್ಹತಾ ಪರೀಕ್ಷೆ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಜಾರಿ ಮಾಡಲು;
2. ರಾಜ್ಯಕ್ಕೆ ಅನ್ವಯವಾಗುವಂತೆ ನಿಗದಿಪಡಿಸಿರುವ ಗರಿಷ್ಠ ಮೊತ್ತವನ್ನು ರೂ.50,000/-ಗಳನ್ನು ನಿಗದಿಪಡಿಸಿದೆ. ಆದರೆ ಇದನ್ನು ಜಿಲ್ಲಾ ಕೇಂದ್ರಗಳಲ್ಲಿರುವ ಪ್ರತಿಷ್ಠಿತ ಶಾಲೆಗಳಿಗೆ ಗರಿಷ್ಠ ಮೊತ್ತ ರೂ.75,000/- ಮತ್ತು ಬೆಂಗಳೂರು ನಗರ ಜಿಲ್ಲೆಗೆ ಮಾತ್ರ ಅನ್ವಯಿಸುವಂತೆ ರೂ.1.00 ಲಕ್ಷಗಳಿಗೆ ಹೆಚ್ಚಿಸಲು;
3. ಪ್ರತಿ ವರ್ಷ ಶೇ.80 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಉತ್ತೀರ್ಣರಾಗಿರಬೇಕು ಎಂಬ ಷರತ್ತನ್ನು ಸಡಿಲಿಸಿ ವಿಶೇಷ ಪ್ರಕರಣಗಳಲ್ಲಿ ಮಾತ್ರ ಉತ್ತಮ ಮೂಲಭೂತ ಸೌಕರ್ಯ ಹೊಂದಿರುವ ಹಾಗೂ ಸರ್ಕಾರ ಇತರೆ ಮಾನದಂಡಗಳನ್ನು ಹೊಂದಿರುವ ಶಾಲೆಗಳನ್ನು ಆಯ್ಕೆ ಮಾಡಲು ರಾಜ್ಯ ಮಟ್ಟದ ಸಮಿತಿಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅವಕಾಶ ಕಲ್ಪಿಸಲು;

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 240 ಪಕವಿ 2017, ಬೆಂಗಳೂರು ದಿನಾಂಕ:22-06-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಪ್ರತಿಭಾವಂತ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಕಲ್ಪಿಸಲು ಮತ್ತು ಪ್ರತಿಷ್ಠಿತ ಶಾಲೆಗಳನ್ನು ಗುರುತಿಸಿ ಮಾನ್ಯತೆ ನೀಡುವ ಬಂಧ ಸರ್ಕಾರದ ಆದೇಶ ಸಂಖ್ಯೆ:ಸಕಇ 62 ಪಕವಿ 2013, ದಿನಾಂಕ:12-06-2013 ರಲ್ಲಿನ ರ್ಗಸೂಚಿಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿ, ಆದೇಶಿಸಿದೆ.

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಅರ್ಹತಾ ಪರೀಕ್ಷೆ ಮೂಲಕ ಆಯ್ಕೆ ಮಾಡುವುದು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18 ನೇ ಸಾಲಿನಲ್ಲಿ ರಾಜ್ಯದ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ನೀಡಬೇಕಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಗುರಿಯನ್ನು 500 ರಿಂದ 750ಕ್ಕೆ ಹೆಚ್ಚಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಸಕಇ 319 ಪಕವಿ 2017 ದಿನಾಂಕ:26.05.2017.
2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ:ಪವಕನಿ;ಇಡಿ-4ಸಿಆರ್;01;2017-18, ದಿನಾಂಕ;04.07.2017.

****

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ; 26.05.2017ರ ಆದೇಶದಲ್ಲಿ 2017-18 ನೇ ಸಾಲಿನಲ್ಲಿ ರಾಜ್ಯದ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ಕಲ್ಪಿಸುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಜಿಲ್ಲಾವಾರು ಗುರಿಯನ್ನು ಪರಿಷ್ಕರಿಸಲಾಗಿರುತ್ತದೆ.

2017-18 ನೇ ಸಾಲಿನಲ್ಲಿ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶಕೋರಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಕಷ್ಟ ಸಾಧ್ಯವಾಗುತ್ತಿರುವುದರಿಂದ ಜಿಲ್ಲಾವಾರು ಗುರಿಯನ್ನು ಹೆಚ್ಚಿಸುವಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಉನ್ನತೀಕರಣದ ಕಾರ್ಯಕ್ರಮಕ್ಕಾಗಿ ರಾಜ್ಯವಲಯ ಲೆಕ್ಕ ಶೀರ್ಷಿಕೆ 2225-02-277-0-36ರಡಿ ಪ್ರೋತ್ಸಾಹ ಧನ ನೀಡಲು ಪೆಚ್ಚವಾಗಿ ಉಳಿಯುವ ಅನುದಾನದಲ್ಲಿ ಹಾಗೂ ಲೆಕ್ಕ ಶೀರ್ಷಿಕೆ 2225-02-001-0-03 ರಡಿ ಅನುದಾನ ಲಭ್ಯವಿರುವುದರಿಂದ ಪ್ರತಿಷ್ಠಿತ ಶಾಲೆಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರುಗುರಿಯನ್ನು 500 ರಿಂದ 750ಕ್ಕೆ ಅನುಬಂಧದಲ್ಲಿರುವಂತೆ ಹೆಚ್ಚಿಸಿ ಆದೇಶ ಹೊರಡಿಸುವಂತೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ;04.07.2017ರ ಏಕಕಡತದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಕೋರಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 251 ಪವಯೋ 2017 ಬೆಂಗಳೂರು, ದಿನಾಂಕ;15.07.2017

ಪ್ರಸ್ತಾವನೆಯಲ್ಲಿ ಕಾರಣಗಳಿಂದ 2017-18 ನೇ ಸಾಲಿನಲ್ಲಿ ರಾಜ್ಯದ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ಕಲ್ಪಿಸುವ ಸಂದರ್ಭದಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಜಿಲ್ಲಾವಾರು ಗುರಿಯನ್ನು ಈ ಕೆಳಕಂಡಂತೆ ಹೆಚ್ಚಿಸಿ ಆದೇಶಿಸಲಾಗಿದೆ.

ಕ್ರ ಸಂ	ಜಿಲ್ಲೆಗಳ ವಿವರ	2017-18ನೇ ಸಾಲಿನಲ್ಲಿ ಸರ್ಕಾರದಿಂದ ನಿಗದಿಪಡಿಸಲಾದ ವಿದ್ಯಾರ್ಥಿಗಳ ಗುರಿ	2017-18ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನಿಗದಿಪಡಿಸಿರುವ ವಿದ್ಯಾರ್ಥಿಗಳ ಗುರಿ
1	ಬೆಂಗಳೂರು ಗ್ರಾಮಾಂತರ	15	4
2	ಬೆಂಗಳೂರು ನಗರ	12	3
3	ರಾಮನಗರ	10	2
4	ದಾವಣಗೆರೆ	23	20
5	ಕೋಲಾರ	5	2
6	ಚಿಕ್ಕಬಳ್ಳಾಪುರ	25	5
7	ಚಿತ್ರದುರ್ಗ	42	8
8	ತುಮಕೂರು	12	10
9	ಶಿವಮೊಗ್ಗ	10	8
10	ಮೈಸೂರು	15	20
11	ಮಂಡ್ಯ	5	2
12	ಹಾಸನ	5	2
13	ಚಾಮರಾಜನಗರ	30	5

9

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಕಇ 62 ಪಕವಿ 2013

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:11.04.2014

ತಿದ್ದುಪಡಿ ಆದೇಶ

ಪ್ರತಿಭಾವಂತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶವನ್ನು ಕಲ್ಪಿಸುವ ಬಗ್ಗೆ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ:ಸಕಇ 62 ಪಕವಿ 2013 ದಿನಾಂಕ:12.06.2013 ರಲ್ಲಿನ ಷರತ್ತು-(6)ರ ಮೊದಲನೇ ಕಂಡಿಕೆಯನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

"ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಇಲ್ಲದಿದ್ದಲ್ಲಿ, ನಂತರದ ತರಗತಿಗಳಿಗೆ ದಾಖಲಾತಿ

Commissioner, Social Welfare Department, BANGALORE.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಪ್ರತಿಗಳು:
1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
6) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
7) ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು
8) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
9) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ ಯೋಜನಾ ಸಮನ್ವಯಾಧಿಕಾರಿಗಳು (ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಮುಖಾಂತರ)
10) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
11) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
12) ಸರ್ಕಾರದ ಅಧೀನ ಕಾರ್ಯದರ್ಶಿಗಳು-2 ಮತ್ತು 3, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
13) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು